ತೊಂದರೆಯಾಗುತ್ತದೆ. ಸಚಿವರು ನೀರನ್ನು ಎಸ್ಕೇಪ್ ಮುಖಾಂತರ ಕೊಡುತ್ತೇವೆಂದು ಆಶ್ವಾಸನೆ ಕೊಡುವುದರ ಜೊತೆಗೆ ಕೂಡಲೇ ನೀರನ್ನು ಬಿಡಿಸಿಕೊಡಬೇಕಾಗಿ ಸಚಿವರಲ್ಲಿ ನಾನು ತಮ್ಮ ಮುಖಾಂತರ ಕೋರಿ ಕೊಳ್ಳುತ್ತಿದ್ದೇನೆ.

ಛೇರ್ಮನ್: ಅದು ಕೊಟ್ಟಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಕೆ.ನ್.ನಾಗೇಗೌಡ: ಅವರು ಹೇಳಿದ್ದನೆಲ್ಲಾ ಪರಿಶೀಲನೆ ಮಾಡುತ್ತೇನೆ.

ಶ್ರೀ ಡಿ.ನಾಗರಾಜಯ್ಯ: ಮಂತ್ರಿಗಳೆ, ಎಸ್ಕೇಪ್ ಮುಖಾಂತರ ನೀರನ್ನು ಬಿಟ್ಟಿಲ್ಲ. ಎಸ್ಕೇಪ್ ಮುಖಾಂತರ ನೀರನ್ನು ಬಿಡದೇ ಹೋದರೆ, ಎಸ್ಕೇಪ್ ಮುಖಾಂತರ ನೀರನ್ನು ಬಿಟ್ಟರು ಕೂಡ ಆ ಡ್ಯಾಂಗೆ ನೀರು ತಲುಪಬೇಕಾದರೆ ನಲವತ್ತೊಂದು ದಿವಸಗಳು ಬೇಕಾಗುತ್ತದೆ.

ಛೇರ್ಮನ್: ಈಗ ಮಂತ್ರಿಗಳು ಆಶ್ವಾಸನೆ ಕೊಟ್ಟು ತಾವು ಹೇಳಿದ್ದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ ಈಗ ತಾವು ಎತ್ತಿರತಕ್ಕಂಥ ಪ್ರಶ್ನೆಗಳನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ, ಇದರ ಬಗ್ಗೆ ಚರ್ಚೆ ಸಾಕು; ತಾವು ಹೇಳಿದ್ದನ್ನೆಲ್ಲಾ ಪರಿಶೀಲನೆ ಮಾಡುತ್ತಾರೆ. ಶ್ರೀ ಪುಟ್ಟಣ್ಣಯ್ಯನವರೇ, ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಚರ್ಚಿಸಲು ತಮ್ಮನ್ನು ಕರೆಯುತ್ತಿದ್ದೇನೆ.

(7) ನಿಯಮ 69ರ ಮೇರೆಗೆ ಚರ್ಚೆ

ವಿಷಯ: 1997-98ನೇ ಸಾಲಿನ ಕಬ್ಬಿಗೆ ಬೆಲೆಯ ನಿಗದಿ ಹಾಗೂ 1996-97ರಲ್ಲಿ ಡಿಸ್ಟಿಲರಿ ಮತ್ತು ನಾನ್ ಡಿಸ್ಟಿಲರಿ ಎಂದು ಕಾರ್ಖಾನೆಗಳನ್ನು ವಿಭಾಗ ಮಾಡಿರುವುದರಿಂದ ರೈತರಿಗಾಗಿರುವ ನಷ್ಟ

\+ ಶ್ರೀ. ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಸನ್ಮಾನ್ಯ ಸಭಾಧ್ಯಕ್ಷರೆ, ಸಾರ್ವಜನಿಕವಾಗಿ ರೈತರ ಮಹತ್ವವಾದ ವಿಚಾರವನ್ನು ನಿಯಮ 69ರಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಸನ್ಮಾನ್ಯ ಉಮೇಶ್ ಕತ್ತಿ, ಸಕ್ಕರೆ ಮಂತ್ರಿಯವರು ಇಲ್ಲೇ ಕುಳಿತಿದ್ದಾರೆ, ಅವರು ಕತ್ತಿ ತೆಗೆದುಕೊಂಡು ಈ ಕಾರ್ಖಾನೆಯಲ್ಲಿ ಯಾರ‍್ಯಾರು ರೈತರಿಗೆ ಮೋಸ ಮಾಡಿದ್ದಾರೆ ಅವರಿಗೆ ಹೊಡೆಯಿರಿ ಎಂದರೆ, ಯಾವಾಗಲೂ ಕತ್ತಿ ತೆಗೆದುಕೊಂಡು ರೈತರಿಗೇ ಹೊಡೆಯುತ್ತಾ ಬಂದಿದ್ದಾರೆ. ಮೊದಲನೆಯದಾಗಿ ರೈತರಿಗೆ ಎಷ್ಟು ಬಾಕಿ ಕೊಡಬೇಕೆನ್ನುವುದನ್ನು ಚರ್ಚೆ ಮಾಡೋಣ. ಒಟ್ಟು ಹದಿನೇಳು ಸಕ್ಕರೆ ಕಾರ್ಖಾನೆಗಳು, ಸಾರ್ವಜನಿಕವಾಗಿ ಎರಡು ಕಾರ್ಖಾನೆಗಳು, ಸಂಯುಕ್ತ ರಂಗಗಳಲ್ಲಿ ಎರಡು ಕಾರ್ಖಾನೆಗಳು, ಖಾಸಗಿ ಕಾರ್ಖಾನೆಗಳು ಒಂಭತ್ತು. ಈಗ ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಭದ್ರಾ ಕಾರ್ಖಾನೆಯಲ್ಲಿ ಬರಬೇಕಾಗಿರುವ ಬಾಕಿ

ಎಪ್ಪತ್ತೈದು ಲಕ್ಷ ರೂಪಾಯಿಗಳು, ಬೀದರ್ ಸಕ್ಕರೆ ಕಾರ್ಖಾನೆಯಲ್ಲಿ 1994-95ನೇ ಇಸವಿಯಲ್ಲಿ ಹತ್ತು ಕೋಟಿ ಎಂಭತ್ತೈದು ಲಕ್ಷ ರೂಪಾಯಿಗಳು ಬಾಕಿ ಬರಬೇಕು.

1. 10 ಪಿ.ಎಂ

1995-96ರಲ್ಲೂ ಹಾಗೇ ಉಳಿದಿದೆ. 1996-97ರಲ್ಲೂ 10.85 ಕೋಟಿ ರೂಪಾಯಿಗಳು ಬಾಕಿ ಇದೆ. ದರ 600 ರೂಪಾಯಿಗಳಂತೆ ಕೊಟ್ಟಿದ್ದಾರೆ. ಆ ರೈತರಿಗೆ ಮೂರು ವರ್ಷವಾದರೂ ಇನೂ ಕಬ್ಬಿನ ಬಾಕಿ ಹಣ ಕೊಟ್ಟಿಲ್ಲ. ಅದಕ್ಕೋಸ್ಕರವೇ ನಾನು ತಾವು ಕತ್ತಿಯಿಂದ ಎಲ್ಲೆಲ್ಲಿ ಹೊಡೆಯುತ್ತಿದ್ದೀರೆಂದು ಹೇಳುತ್ತಿದ್ದೇನೆ. ದಕ್ಷಿಣ ಕನ್ನಡದಲ್ಲಿ ಬಾಕಿ ಕೊಡಬೇಕಾಗಿರುವ ಮೊತ್ತ 26 ಲಕ್ಷ 50 ಸಾವಿರ ರೂಪಾಯಿಗಳಾಗಿದೆ. ದೂದ್‌ಗಂಗಾ ಕೃಷ್ಣಾದಲ್ಲಿ ಬಾಕಿ ಕೊಡಬೇಕಾಗಿರುವುದು 1 ಕೋಟಿ 68 ಲಕ್ಷ ರೂಪಾಯಿಗಳು.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ:- ಮಾನ್ಯ ಅಧ್ಯಕ್ಷರೇ, ದೂದ್‌ಗಂಗಾ ಕೃಷ್ಣಾ ಸಕ್ಕರೆ ಕಾರ್ಖಾನೆ ಬಾಕಿ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳುವ ಮುಂಚೆ ಉತ್ತರ ಕರ್ನಾಟಕದ ರೈತರ ಬಗ್ಗೆ ನಾವೇನು ಕಾಳಜಿ ತೆಗೆದುಕೊಂಡಿದ್ದೇವೆ ಎಂಬುದನ್ನು ಅವರು ಮೊದಲು ನಮ್ಮಿಂದ ತಿಳಿದುಕೊಳ್ಳಬೇಕು. ದೂದ್‌ಗಂಗಾ ಹೆಸರು ಹೇಳಿದ ಮೇಲೆ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಛೇರ್ಮನ್: ಮಾನ್ಯ ಪುಟ್ಟಣ್ಣಯ್ಯನವರು ಮೊದಲು ತಮ್ಮ ಹೇಳಿಕೆ ಮುಗಿಸಲಿ. ಮಾನ್ಯ ಪುಟ್ಟಣ್ಣಯ್ಯನವರು ಮಾತನಾಡಿದ ಮೇಲೆ ನೀವು ಮಾತನಾಡಿ. ನಿಮಗೂ ಮಾತನಾಡಲು ಅವಕಾಶ ಕೊಡುತ್ತೇನೆ. ಅವರು ಕೇವಲ ಅಂಕಿ ಅಂಶಗಳನ್ನಷ್ಟೇ ಹೇಳುತ್ತಿದ್ದಾರೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ:- ದೂದ್‌ಗಂಗಾದವರು ರೈತರಿಗೆ ಬಾಕಿ ಕೊಡಬೇಕೆಂದು ಹೇಳಿದ ಮೇಲೆ ನಾವು ಅದರ ಬಗ್ಗೆ ಮಾತನಾಡಲೇಬೇಕಾಗುತ್ತದೆ.

ಶ್ರೀ ಕೆ.ಎಸ್.ಪಟ್ಟಣ್ಣಯ್ಯ:- ಎಲ್ಲಾ ಅಂಶಗಳನ್ನೂ ಗುರುತು ಹಾಕಿಕೊಂಡು ನೀವು ನನ್ನ ಅನಂತರ ಮಾತನಾಡಬಹುದು. ಹೇಮಾವತಿಯಲ್ಲಿ 21 ಸಾವಿರ, ಮಲಪ್ರಭಾದಲ್ಲಿ 58 ಲಕ್ಷದ 55 ಸಾವಿರ ರೂಪಾಯಿಗಳು ರಾಯಭಾಗ್‌ನಲ್ಲಿ 363 ಲಕ್ಷ ರೂಪಾಯಿಗಳು ಅಳಂದ ಕಾರ್ಖಾನೆಯಲ್ಲಿ 4 ಕೋಟಿ 85 ಲಕ್ಷ ರೂಪಾಯಿಗಳು, ಕರ್ನಾಟಕ ಫ್ಯಾಕ್ಟರಿಯಲ್ಲಿ 98 ಲಕ್ಷ ರೂಪಾಯಿಗಳನ್ನು ರೈತರಿಗೆ ಬಾಕಿ ಕೊಡಬೇಕಾಗಿದೆ. ಇನ್ನು ಖಾಸಗಿ ಸಕ್ಕರೆ ಕಾರ್ಖಾನೆಗಳು ರೈತರಿಗೆ ಉಳಿಸಿಕೊಂಡಿರುವ ಬಾಕಿ ಹಣದ ವಿವರವನ್ನು ಹೇಳುವುದಾದರೆ, ಬನೇರಿಯಮ್ಮ ಸಕ್ಕರೆ ಕಾರ್ಖಾನೆ 18 ಸಾವಿರ ರೂಪಾಯಿಗಳು, ಚಾಮುಂಡೇಶ್ವರಿ ಶುಗರ್ಸ್ 5 ಕೋಟಿ 84 ಲಕ್ಷ ರೂಪಾಯಿಗಳು ಶಿರಗುಪ್ಪ ಶುಗರ್ಸ್ 39

ಲಕ್ಷ ರೂಪಾಯಿಗಳು, ತುಂಗಭದ್ರಾ ಶುಗರ್ಸ್ 1 ಕೋಟಿ ರೂಪಾಯಿಗಳು, ಮಹದೇಶ್ವರ ಶುಗರ್ ಮಿಲ್ಸ್ 65 ಲಕ್ಷ 28 ಸಾವಿರ ರೂಪಾಯಿಗಳು, ಉಗಾರ್ 1994-95, 1995-96ರಲ್ಲಿ 9 ಲಕ್ಷದ 13 ಸಾವಿರ ರೂಪಾಯಿಗಳು, 1996-97ರಲ್ಲಿ 6 ಲಕ್ಷದ 65 ಸಾವಿರ ರೂಪಾಯಿಗಳು ಒಟ್ಟು 15 ಲಕ್ಷದ 81 ಸಾವಿರ ರೂಪಾಯಿಗಳನ್ನು ಬಾಕಿ ಕೊಡಬೇಕಾಗಿದೆ. ಎಲ್ಲಾ ಸೇರಿ ಒಟ್ಟಾರೆ 31 ಕೋಟಿ 64 ಲಕ್ಷದ 91 ಸಾವಿರರೂಪಾಯಿಗಳನ್ನು ಕರ್ನಾಟಕದಲ್ಲಿರತಕ್ಕಂತಹ ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳು ಬಾಕಿ ಕೊಡಬೇಕಾಗಿದೆ. ಆದರೆ ಇದುವರೆವಿಗೂ ಬಾಕಿ ಕೊಡದಿರುವವರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಅದರಲ್ಲೂ ನಾನು ಹೇಳಿದ ಮಹದೇಶ್ವರ ಸಕ್ಕರೆ ಕಾರ್ಖಾನೆ, ಖೋಡೆಯವರಿಗೆ ಸೇರಿದ್ದು, ಇದರ ವಿರುದ್ಧ ಏನೂ ಕ್ರಮ ತೆಗೆದುಕೊಂಡಿಲ್ಲ. ಕಾರ್ಖಾನೆಯನ್ನು ನಿಲ್ಲಿಸಿ ಎರಡು ವರ್ಷಗಳಾಗಿದೆ. 11 1/2 ಕೋಟಿ ರೂಪಾಯಿಗಳನ್ನು ಬಾಕಿ ಕೊಡಬೇಕಾಗಿದ್ದು, ಇಲ್ಲಿಯವರೆಗೂ ಸ್ವಲ್ಪ ಸ್ವಲ್ಪ ಬಾಕಿ ಕೊಟ್ಟುಕೊಂಡು ಬಂದು ಈಗ ಇನ್ನೂ ಬಾಕಿ ಕೊಡಬೇಕಾಗಿರುವುದು ಉಳಿದಿದೆ. ಕಾರ್ಖಾನೆ ಬಾಗಿಲು ಹಾಕಿ ಎರಡು ವರ್ಷಗಳಾಗಿವೆ. ಕಬ್ಬು ಬೆಳೆಗಾರರು ಅಲ್ಲಿ ನಷ್ಟ ಹೊಂದಿದ್ದಾರೆ. ಒಟ್ಟು ಅಲ್ಲಿ ಕಬ್ಬು ಬೆಳೆಗಾರರು 2,724 ಜನ ಇದ್ದಾರೆ, 4,454 ಎಕರೆ ಪ್ರದೇಶದಲ್ಲಿ ಅವರು ಕಬ್ಬು ಬೆಳೆಯುತ್ತಾರೆ. 11 ಕೋಟಿ 28 ಲಕ್ಷ ರೂಪಾಯಿಗಳ ಬಾಕಿ ಹಣ ಇನ್ನೂವರೆಗೆ ಕೊಟ್ಟಿಲ್ಲ. ಅಲ್ಪ ಸ್ವಲ್ಪ ಕೊಟ್ಟುಕೊಂಡು ಬಂದಿದ್ದಾರಷ್ಟೆ. ಅವರಮೇಲೆ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲ. ಖೋಡೇಸ್‌ನವರ ಕಾರ್ಖಾನೆ ವಿರುದ್ಧ ಯಾವ ಕಾರಣಕ್ಕೂ ಏನೂ ಕ್ರಮ ತೆಗೆದುಕೊಳ್ಳದಿರುವುದಕ್ಕೆ ಏನು ಕಾರಣ ಎಂದು ನನಗೆ ಗೊತ್ತಾಗುತ್ತಿಲ್ಲ. ಕಾಡಿನಲ್ಲಿರುವ ವೀರಪ್ಪನ್ ಒಳಗೆ ಬಂದ, ಈ ವೀರಪ್ಪನ್‌ಗೆ ಮಾತ್ರ ನೀವೇನೂ ಕ್ರಮ ತೆಗೆದುಕೊಳ್ಳಲಿಕ್ಕಾಗಲಿಲ್ಲ. ಅದ್ಯಾಕೆ ಎಂದು ನನಗೂ ಗೊತ್ತಾಗಲಿಲ್ಲ. ಅವರು ಫ್ಯಾಕ್ಟರಿ ನಿಲ್ಲಿಸಿ ಆರಾಮಾಗಿರುತ್ತಾನೆ. ಅದಕ್ಕೆ ಒಂದು ನಿಯಮ ಇದೆ. ಶುಗರ್‌ಕೇನ್ ಕಂಟ್ರೋಲ್ ಆರ್ಡರ್‌ನಲ್ಲಿ ಏನು ಎಂದು ಹೇಳಲಾಗಿದೆ ಅಂದರೆ ಕಬ್ಬನ್ನು ಅರೆದ 14 ದಿವಸಗಳೊಳಗಾಗಿ ಪೇಮೆಂಟ್ ಕೊಡದಿದ್ದ ಪಕ್ಷದಲ್ಲಿ ಕೇಂದ್ರ ಸರ್ಕಾರ ಒಂದು ಆದೇಶ ಕೊಟ್ಟಿದೆ. ಅದೇನೆಂದರೆ ಬಾಕಿ ಹಣಕ್ಕೆ ಶೇಕಡ 15ರಷ್ಟು ಬಡ್ಡಿ ಸೇರಿಸಿ, ಆ ಬಡ್ಡಿ ಸಮೇತ ಬಾಕಿ ಹಣ ಪಾವತಿಸಬೇಕಾಗಿರುತ್ತದೆ. ಆದರೆ, ಬಡ್ಡಿ ಸಮೇತ ಈ ಕಾರ್ಖಾನೆಗಳು ಯಾವುವೂ ಬಾಕಿ ಕೊಟ್ಟಿಲ್ಲ. ಸರ್ಕಾರವೂ ಅದರ ಬಗ್ಗೆ ಕ್ರಮ ಕೈಗೊಂಡಿಲ್ಲ. ರಾಜ್ಯ ಸರ್ಕಾರದವರು ಮಾತೆತ್ತಿದರೆ ಕೇಂದ್ರ ಸರ್ಕಾರದ ಆದೇಶ ನಮಗೆ ಭಗವದ್ಗೀತೆ ಇದ್ದಹಾಗೆ ಎಂದು ಹೇಳುತ್ತಿರುತ್ತೀರಿ. ಅದರ ಪ್ರಕಾರ ನೀವು ರೈತರಿಗೆ ಬಡ್ಡಿ ಕೊಡಿಸಿಲ್ಲ. 'ಇದು ಕೇಂದ್ರ ಸರ್ಕಾರದ ಬೆಲೆಗಿಂತ ಜಾಸ್ತಿ ಹಣವನ್ನು ಕೊಟ್ಟಿರುವುದರಿಂದ ಅದು ಹಂತ ಹಂತವಾಗಿ ಹಣವನ್ನು ಒಂದೇ ಸಾರಿ ಕೊಡದೇ ಇರುವುದು ಬಹಳ ಕಷ್ಟಕರವಾಗಿರುವುದರಿಂದ, ಹಂತ ಹಂತವಾಗಿ ಕೊಟ್ಟಿರುವುದರಿಂದ ನಾವು ಬಡ್ಡಿ ಕೊಡಿಸಲಿಕ್ಕಾಗಿಲ್ಲ ಎಂದು ತಾವು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಕೇಂದ್ರ ಸರ್ಕಾರ ನಿಗದಿ ಮಾಡಿರತಕ್ಕಂತಹ ಬೆಲೆಗಿಂತ ರಾಜ್ಯ

ಸರ್ಕಾರದವರು ಜಾಸ್ತಿ ಬೆಲೆಗೆ ನಿಗದಿ ಮಾಡಿಸಿ ರೈತರಿಗೆ ಅನುಕೂಲ ಮಾಡಿಕೊಡುತ್ತಿರುವುದರಿಂದ ಬಡ್ಡಿಯನ್ನು ನಾವು ಕೊಡಿಸಲಿಕ್ಕೆ ಆಗಿಲ್ಲ ಎಂದು ತಾವು ಹೇಳಿದ್ದೀರಿ. ನಾನು ಸರ್ಕಾರಕ್ಕೆ ಹೇಳುವುದೇನೆಂದರೆ, ಕೇಂದ್ರ ಸರ್ಕಾರ ಏನು ಹಣ ನಿಗದಿ ಮಾಡಿದೆ, ಅಷ್ಟು ಹಣಕ್ಕಾದರೂ ನೀವು ರೈತರಿಗೆ ಬಡ್ಡಿ ಕೊಡಿಸಿ. 750 ರೂಪಾಯಿಗಳು ಬೆಂಬಲ ಬೆಲೆ ತಾವು ಕೊಡಿಸಿರಬಹುದು. ಕೇಂದ್ರ ಸರ್ಕಾರ 500 ರೂಪಾಯಿಗಳ ಬೆಲೆ ನಿಗದಿ ಮಾಡಿದೆ. ಈ ಎರಡರ ನಡುವಣ ವ್ಯತ್ಯಾಸದ 285 ರೂಪಾಯಿಗಳಿಗೆ ನಮಗೆ ಬಡ್ಡಿ ಬೇಡ. 500 ರೂಪಾಯಿಗಳಿಗಾದರೂ ನಮಗೆ ಬಡ್ಡಿಯನ್ನು ಸರ್ಕಾರದವರು ಕೊಡಿಸಬಹುದಲ್ಲವೇ? ಕೇಂದ್ರ ಸರ್ಕಾರದ ನಿಯಮವನ್ನು ತಾವು ತಿರಸ್ಕಾರ

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಮಾಡಿದ್ದೀರಿ. ಸರ್ಕಾರ ಮಧ್ಯೆ ಪ್ರವೇಶ ಮಾಡಿ ಯಾವ ಯಾವ ಬಾಕಿ ಕೊಡಬೇಕೋ ಆ ಬಾಕಿದಾರರಿಗೆ ಬಡ್ಡಿ ಸಮೇತ ಕೊಡಬೇಕು ಎಂದು ನಿರ್ದೇಶನ ನೀಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಕಬ್ಬಿನ ಬೆಲೆ ನಿಗದಿ ಮಾಡುವ ಬಗ್ಗೆ ಹಾಗೂ ನಾನು ಎಲ್ಲಾ ಅಂಶಗಳ ಬಗ್ಗೆಯೂ ಒಟ್ಟಿಗೇ ಹೇಳಿ ಬಿಡುತ್ತೇನೆ. ಮಾನ್ಯ ಮಂತ್ರಿಗಳು ಒಟ್ಟಿಗೇ ಉತ್ತರ ಕೊಡಬಹುದು. ಸುಮಾರು ಎರಡು ಸಾವಿರಕೋಟಿ ರೂಪಾಯಿಗಳ ವ್ಯವಹಾರ ಮಾಡುತ್ತಿರತಕ್ಕಂತಹ, ಕಬ್ಬಿನ ಮೇಲೆಯೇ ಅವಲಂಬಿಸಿರುವ ಸುಮಾರು ಒಂದು ಕೋಟಿ ರೈತರಿಗೆ ಬೆಲೆ ನಿಗದಿ ಮಾಡುವುದಕ್ಕೆ ಕಾಲ ವಿಲಂಬವಾಗುವುದಕ್ಕೆ ಕಾರಣವೇನು? ತಾವು ಆಗಲೇ ಏಪ್ರಿಲ್, ಮೇ ತಿಂಗಲ್ಲಿ ಹೈ ಪವರ ಕಮಿಟಿ ಮೀಟಿಂಗ್ ಕರೆಯಬೇಕಾಗಿತ್ತು. ಯಾವ ಯಾವ ಕಾರ್ಖಾನೆ ಎಫಿಷಿಯೆನ್ಸಿ ಇದೆ, ಯಾವ ಯಾವ ಪರ್ಸೆಂಟೇಜ್ ಅವರಿಗೆ ರೆಕವರಿ ಬರುತ್ತಿದೆ? ಯಾವ ಯಾವ ಕಾರ್ಖಾನೆಗಳು ಆಡಳಿತದ ಲೋಪ ದೋಷಗಳಿಂದ ನಷ್ಟ ಅನುಭವಿಸುತ್ತಿವೆ? ಯಾವ ಯಾವ ಕಾರ್ಖಾನೆಗಳು ಎಷ್ಟೆಷ್ಟು ಹೆಚ್ಚು ಕಬ್ಬನ್ನು ತೆಗೆದುಕೊಳ್ಳಬೇಕು? ಯಾವ ಯಾವ ಕಾರ್ಖಾನೆ ಕಡಿಮೆ ಕಬ್ಬನ್ನು ತೆಗೆದುಕೊಳ್ಳಬೇಕು ಮುಂತಾದ ಅಂಶಗಳ ಬಗ್ಗೆ ಚರ್ಚೆ ಮಾಡಿ ಎಲ್ಲಾ ಕಾರ್ಖಾನೆಗಳೂ ಉತ್ತಮವಾಗಿ ನಡೆಯತಕ್ಕಂತಹದ್ದರ ಬಗ್ಗೆ ತಾವು ಚರ್ಚೆ ಮಾಡಬೇಕಾಗಿತ್ತು. ಆದರೆ ಇದುವರೆಗೂ ತಾವು ಏನೂ ಮಾಡಲಿಲ್ಲ. ಎಲ್ಲಾ ಸಕ್ಕರೆ ಕಾರ್ಖಾನೆಗಳೂ ಒಂದೇ ಸಾರಿಗೆ ಶುರುವಾಗುವುದಿಲ್ಲ. ಈ ವಿಷಯ ಸರ್ಕಾರಕ್ಕೆ ಗೊತ್ತಿದೆಯೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಜೂನ್, ಜುಲೈ, ಆಗಸ್ಟ್ ತಿಂಗಳುಗಳಲ್ಲಿ ಕೆಲವು ಕಾರ್ಖಾನೆಗಳು ಶುರುವಾಗುತ್ತವೆ. ಅಕ್ಟೋಬರ್, ನವೆಂಬರ್, ಡಿಸೆಂಬರ್ ತಿಂಗಳಲ್ಲಿ ಇನ್ನೂ ಕೆಲವು ಕಾರ್ಖಾನೆಗಳು ಶುರುವಾಗುತ್ತವೆ. ಫೆಬ್ರವರಿ, ಮಾರ್ಚ್, ಏಪ್ರಿಲ್ ತಿಂಗಳುಗಳಲ್ಲಿ ಮತ್ತೆ ಕೆಲವೊಂದು ಕಾರ್ಖಾನೆಗಳು ಶುರುವಾಗುತ್ತದೆ. ಬೆಂಬಲ ಬೆಲೆ ನಿಗದಿಪಡಿಸಲು ಏಕೆ ವಿಳಂಬವಾಗುತ್ತಿದೆ? ಯಾವ ಆಧಾರದ ಮೇಲೆ ಬೆಲೆ ನೀತಿ ಕೊಡಬೇಕು? ಇವತ್ತು

ಈಗಾಗಲೇ ಬನೇರಿಯಮ್ಮ ಸಕ್ಕರೆ ಕಾರ್ಖಾನೆಗೆ ರೈತರು ಮುತ್ತಿಗೆ ಹಾಕತಕ್ಕಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಬಡ್ಡಿ ಬಾಕಿ ಬಗ್ಗೆ, ಬೆಲೆ ನಿಗದಿ ಬಗ್ಗೆ ರೈತರು ಈ ಪ್ರತಿಭಟನೆ ಮಾಡುತ್ತಿದ್ದಾರೆ. ಈಗಾಗಲೇ ಕೆಲವು ಕಾರ್ಖಾನೆಗಳು ರೆಕವರಿ ಪಾಯಿಂಟ್ ಕಡಿಮೆ ತೋರಿಸುತ್ತಾ ಇವೆ. ಖಾಸಗಿ ಕಾರ್ಖಾನೆಗಳು ಏನು ರಿಕ್ವರಿ ಪಾಯಿಂಟ್ ಎಂದು ಶುಗರ್ ಪರ್ಸೆಂಟೇಜ್ ಇರುತ್ತದೆಯೋ ಈಗಾಗಲೇ ಅದನ್ನು ಕಡಿಮೆ ತೋರಿಸುತ್ತಿವೆ. ಹೋದ ವರ್ಷ 10% ಚಿಲ್ಲರೆ ತೋರಿಸಿದರೆ, ಈ ಬಾರಿ 9.45% ಅಥವಾ 9.25% ತೋರಿಸುತ್ತವೆ. ಇದ್ದಕ್ಕಿದ್ದ ಹಾಗೆ ಕಬ್ಬು ಏನಾದರೂ ಬೇರೆ ಆಗಿ ಹೋಯಿತೇ? ಇಲ್ಲಾಂದರೆ ಭೂಮಿ ಬದಲಾವಣೆ ಆಯಿತೇ? ಎಂದರೆ ಅಂಥದ್ದು ಏನೂ ಇಲ್ಲ. ರೈತರು ಕಾರ್ಖಾನೆಗಳಿಗೆ ಉತ್ತಮವಾದ ಕಬ್ಬನ್ನು ಬೆಳೆದುಕೊಡುತ್ತಿದ್ದಾರೆ. ಆದರೆ ಕಾರ್ಖಾನೆಗಳು ಉದ್ದೇಶಪೂರ್ವಕವಾಗಿ ರೈತರಿಗೆ ಮೋಸ ಮಾಡುತ್ತಿವೆ. ಈಗಾಗಲೇ ಕಾಕಂಬಿ ಬೆಲೆ ಬಹಳ ಜಾಸ್ತಿಯಾಗಿದೆ. ಕಾಕಂಬಿ ಬೆಲೆ ಹೋದ ವರ್ಷ 500 ರೂಪಾಯಿಗಳು ಇತ್ತು. ಈಗ ಕಾಕಂಬಿ ಬೆಲೆ 3 ಸಾವಿರ ರೂಪಾಯಿಗಳಾಗಿದೆ. ಅಂದರೆ ಮೊದಲಿಗಿಂತ 2,500 ರೂಪಾಯಿ ಬೆಲೆ ಜಾಸ್ತಿಯಾಗಿದೆ. ಲೆವಿ ಬೆಲೆ ಎರಡು ಸಾರಿ ಜಾಸ್ತಿಯಾಗಿದೆ. ಓಪನ್ ಮಾರ್ಕೆಟ್‌ನಲ್ಲಿ ಎರಡು ಸಾರಿ ಬೆಲೆ ಜಾಸ್ತಿಯಾಗಿದೆ. ಆದುದರಿಂದ, ಸರ್ಕಾರದವರು ಅತ್ಯಂತ ಗಂಭೀರವಾಗಿ ಇದನ್ನು ಪರಿಗಣಿಸಿ ತ್ವರಿತವಾಗಿ ಮೀಟಿಂಗ್ ಮಾಡಿ ಬೆಲೆ ನಿಗದಿಪಡಿಸಬೇಕು. ಈ ಸಾರಿ ಎಲ್ಲಾ ಕಾರ್ಖಾನೆಗಳೂ ನಷ್ಟವಾಗುತ್ತದೆ ಎಂಬುದನ್ನು ಸರ್ಕಾರ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಎರಡು ವರ್ಷಗಳಾದ ಕಬ್ಬು ಬೆಳೆಯತಕ್ಕಂತಹ ರೈತ ಆ ಸಂಕಟವನ್ನು ತಾಳಲಾರದೇ ಕಬ್ಬಿಗೆ ಬೆಂಕಿ ಇಡುತ್ತಿದ್ದಾನೆ. ಆತ ಬೆಲೆ ನೀತಿಯಿಂದ ಬಹಳ ಮೋಸ ಹೋಗಿದ್ದಾನೆ. ತಾವು ಯಾವಾಗಲೂ ಕೇಂದ್ರ ಸರ್ಕಾರ, ಕೇಂದ್ರ ಸರ್ಕಾರ ಎಂದು ಹೇಳುತ್ತೀರಿ. ರಾಜ್ಯ ಸರ್ಕಾರದಿಂದ ತಾವೇನು ಪ್ರಯತ್ನ ಮಾಡಿದ್ದೀರಿ? ಕೇವಲ ಕೇಂದ್ರ ಸರ್ಕಾರದ ಮೇಲೆಯೇ ತಾವು ಯಾವಾಗಲೂ ಹೇಳುವುದಲ್ಲ. ಕೇಂದ್ರ ಮತ್ತು ರಾಜ್ಯಗಳೆರಡರಲ್ಲೂ ತಮ್ಮ ಪಕ್ಷದ ಸರ್ಕಾರವೇ ಅಧಿಕಾರದಲ್ಲಿದೆ. ತಾವು ದಯವಿಟ್ಟು ಕೇಂದ್ರ ಸರ್ಕಾರದ ಜೊತೆಯಲ್ಲಿ ಏನನ್ನೂ ಚರ್ಚೆ ಮಾಡಿದ್ದೀರಿ? ಎಂಬುದನ್ನು ಹೇಳಬೇಕು. ನೀವು ಕೇಂದ್ರ ಸರ್ಕಾರದ ಜೊತೆಯಲ್ಲಿ ಏನನ್ನೂ ಚರ್ಚೆ ಮಾಡಿಲ್ಲ. ತಾವು ಕೇಂದ್ರ ಸರ್ಕಾರಕ್ಕೆ ತಿಳುವಳಿಕೆ ಕೊಡಬೇಕು. ಇಡೀ ದೇಶದ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಕಬ್ಬಿನ ಬಗ್ಗೆ ತಿಳುವಳಿಕೆ ಕೊಡಬೇಕು. ಏಕೆಂದರೆ, ಪ್ರಪಂಚದಲ್ಲಿ ಸಕ್ಕರೆ ಉತ್ಪಾದಿಸುವಲ್ಲಿ ನಾವೇ ಮೊದಲನೆಯವರು. ನಾವು ಇಷ್ಟೊಂದು ಸಕ್ಕರೆ ಉತ್ಪಾದನೆ ಮಾಡಿ, ಒಂದು ಲಕ್ಷ ಟನ್‌ನಷ್ಟು ಸಕ್ಕರೆ ನಮಗೇ ಜಾಸ್ತಿಯಾಗಿ, ಹೊರ ದೇಶಕ್ಕೆ 30 ಲಕ್ಷ ಟನ್ ಸಕ್ಕರೆಯನ್ನು ರಫ್ತು ಮಾಡತಕ್ಕಂತಹ ಸಾಮರ್ಥ್ಯ ಇರತಕ್ಕಂತಹ ರೈತರಿಗೆ, ಈಗಾಗಲೇ ಒಂದು ಲಕ್ಷ ಟನ್ ಸಕ್ಕರೆಯನ್ನು ಹೊರದೇಶಗಳಿಂದ ತರಿಸಿಕೊಳ್ಳತಕ್ಕಂತಹ ಪ್ಲಾನ್ ಮಾಡಿಕೊಂಡಿರುತ್ತಾರೆ. ಸಕ್ಕರೆ ಉತ್ಪಾದನೆಯಲ್ಲಿ ನಾವೇ ಪ್ರಪಂಚಕ್ಕೆ ಮೊದಲಿಗರಾದರೂ ಒಂದು ಲಕ್ಷ ಟನ್ ಸಕ್ಕರೆಯನ್ನು ಹೊರಗಿನಿಂದ ತರಿಸಿಕೊಳ್ಳುತ್ತಿದ್ದೇವೆ. ಮಕ್ಕಳನ್ನು ಹುಟ್ಟಿಸುವುದರಲ್ಲೂ

ಪ್ರಪಂಚಕ್ಕೆ ನಾವೇ ಮೊದಲನೆಯವರು. 2 ಕೋಟಿ ಮಕ್ಕಳನ್ನೂ ಹೊರಗಡೆಯಿಂದ ತರಿಸಿಕೊಂಡು ಬಿಡಿ, ಆಗ ಎಲ್ಲಾ ಸರಿ ಹೋಗುತ್ತದೆ. ನಾವೇ ಹೆಚ್ಚು ಉತ್ಪಾದನೆಯಾಗಿ ಹೊರಗಡೆ ಕಳುಹಿಸುತ್ತೇವೆ ಎಂದರೆ, ಕೇಂದ್ರ ಸರ್ಕಾರ ನೀತಿ ಮೂಲಕ 1 ಲಕ್ಷ ಟನ್ ಸಕ್ಕರೆಯನ್ನು ನಾವು ಹೊರಗಡೆಯಿಂದ ತರಿಸಿಕೊಳ್ಳುತ್ತಿದ್ದೇವೆ. ದಯವಿಟ್ಟು ಇದರ ಬಗ್ಗೆ ರಾಜ್ಯ ಸರ್ಕಾರ ಗಮನ ಹರಿಸಬೇಕು. ರೈತರಿಗೆ ನ್ಯಾಯವಾದ ಬೆಲೆ ಕೊಡಬೇಕಾದರೆ ದಯವಿಟ್ಟು ಕೇಂದ್ರ ಸರ್ಕಾರದ ಆಮದು ನೀತಿ ಏನಿದೆ ಅದನ್ನು ರಾಜ್ಯ ಸರ್ಕಾರ ವಿರೋಧ ಮಾಡುವುದರ ಮೂಲಕ ಕೇಂದ್ರ ಸರ್ಕಾರದ ಗಮನ ಸೆಳೆದು ದಯವಿಟ್ಟು ಸಕ್ಕರೆ ತರಿಸಿಕೊಳ್ಳಧೇ ಇರತಕ್ಕ ದಿಕ್ಕಿನಲ್ಲಿ ರಾಜ್ಯ ಸರ್ಕಾರ ಕೆಲಸ ಮಾಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಕೆಲವು ಖಾಸಗಿ ಕಾರ್ಖಾನೆಗಳು ತೂಕದಲ್ಲಿ ಮೋಸ ಮಾಡತಕ್ಕಂಥ ವಿಷಯ ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ದಯವಿಟ್ಟು ರೈತರದೇ ಆದಂಥ ತೂಕದ ಯಂತ್ರವನ್ನು ಅಳವಡಿಸುವುದಕ್ಕೆ ಅನುಕೂಲವಾಗುವಂಥ ಒಂದು ನೀತಿಯನ್ನು ರೂಪಿಸಬೇಕು. ಸರ್ಕಾರದ ಮೂಲಕ ಏನಾದರೂ ಒಂದು ತೂಕದ ಯಂತ್ರವನ್ನು ಇಟ್ಟು ಕಬ್ಬು ಬೆಳೆಯುವ ರೈತರಿಗೆ ತೂಕದಲ್ಲಿ ಮೋಸವಾಗುತ್ತಿದ್ದು ಈ ಅನ್ಯಾಯವನ್ನು ತಡೆಯಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರ ಮೂಲಕ ನಾನು ಮನವಿ ಮಾಡಿಕೊಳ್ಳುತ್ತೇನೆ. ಇನ್ನು 1994-95 ಮತ್ತು 1995-96 ಈ 2 ವರ್ಷಗಳಲ್ಲಿ ಕಬ್ಬು ಬೆಳೆಗಾರರ ಜೀವನ ಅಸ್ತವ್ಯಸ್ಥವಾಗಿದೆ. ಕಬ್ಬು ಬೆಳೆಯುವ ರೈತರ ಜೀವನಕ್ಕೆ ಹೊಸ ಆಶಾಕಿರಣವನ್ನು ಸೃಷ್ಟಿಮಾಡುತ್ತೇವೆಂದು ಸಾಗಾಣಿಕೆ ವೆಚ್ಚದಲ್ಲಿ ಸಬ್ಸಿಡಿ ರೂಪದಲ್ಲಿ ಕಿ.ಮೀ.ಗೆ 50 ಪೈಸೆಯನ್ನು ಕೊಡುತ್ತೇವೆಂದು ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಹೇಳಿದರು. ಹಾಗೆ ಸಬ್ಸಿಡಿ ಕೊಡುವಂಥದ್ದು ಇನ್ನೂ ಕೂಡ ಬಾಕಿ ಇದೆ. ಈ ರೀತಿಯ ಬಾಕಿ ಎಷ್ಟು ಕೊಡಬೇಕು? ಆ ಬಾಕಿಯನ್ನು ಇಲ್ಲಿಯವರೆಗೆ ಏಕೆ ಕೊಟ್ಟಿಲ್ಲ? ಇದಕ್ಕೆ ಏನು ಕಾರಣ? ಎಂದು ತಾವು ದಯಮಾಡಿ ಹೇಳಬೇಕು. ಒಂದು ನಿಯಮವನ್ನು ಸರ್ಕಾರ ಮಾಡಿದೆ. ಆದರೆ, ಅದು ಮಾನ್ಯ ಸಕ್ಕರೆ ಸಚಿವರಿಗೆ ಬರುತ್ತದೋ ಅಥವಾ ಮಾನ್ಯ ಸಹಕಾರ ಸಚಿವರಿಗೆ ಬರುತ್ತದೋ ಅದು ನನಗೆ ಗೊತ್ತಿಲ್ಲ. ನನಗೆ ತಿಳಿದುಬಂದಿರುವ ಮಾಹಿತಿಯ ಪ್ರಕಾರ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ಹತ್ತಿರದಲ್ಲಿ ಅಂದರೆ ಮಂಡ್ಯಾ ಜಿಲ್ಲೆಯಲ್ಲಿ ಇದೆ. ಪಾಂಡವಪುರದಲ್ಲಿನ ಸೊಸೈಟಿಗೆ ಮತ್ತು ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಗೂ ಕೇವಲ 3 ಕಿ.ಮೀ. ಅಂತರವಿದೆ. ಆದರೆ, ಪಾಂಡವಪುರ ಸೊಸೈಟಿಗೆ ಸಕ್ಕರೆಯನ್ನು ಬೆಳಗಾಂನಿಂದ ತರಿಸಬೇಕು. ಇದು ಹೇಗೆಂದರೆ, ಯಾರೊ ಒಬ್ಬ ಮಹಮ್ಮದ್ ತೊಘಲಕ್ ಇದ್ದನಂತೆ, ಅವನು ದೆಹಲಿಯಿಂದ ದೇವಗಿರಿಗೆ, ದೇವಗಿರಿಯಿಂದ ದೆಹಲಿಗೆ ಎಂದು ಹೇಳುತ್ತಿದ್ದನಂತೆ. ಸನ್ಮಾನ್ಯ ಹಿರಿಯ ಸಚಿವರಾದ ಪ್ರಕಾಶ್‌ರವರೆ, ತಾವು ದಯಮಾಡಿ ಗಮನಿಸಬೇಕು, 7,500 ರೂಪಾಯಿ ಬಾಡಿಗೆ ಕೊಟ್ಟು ಬೆಳಗಾಂನಿಂದ ಪಾಂಡವಪುರದಲ್ಲಿನ ಸೊಸೈಟಿಗೆ ಸಕ್ಕರೆಯನ್ನು ತರಿಸಿಕೊಳ್ಳುವುದು ಹಾಗೆಯೇ 7,500 ರೂಪಾಯಿ ಬಾಡಿಗೆ ಕೊಟ್ಟು ಪಾಂಡವಪುರ ಸಹಕಾರಿ ಸಕ್ಕರೆ

ಕಾರ್ಖಾನೆಯಿಂದ ಸಕ್ಕರೆಯನ್ನು ಬೆಳಗಾಂಗೆ ತರಿಸಿಕೊಳ್ಳುವುದು ಇದು ಸರ್ಕಾರದ ನಿಯಮವಾಗಿದೆ.

ಅಧ್ಯಕ್ಷರು: ಮಾನ್ಯ ಪುಟ್ಟಣ್ಣಯ್ಯನವರೆ, ಚರಿತ್ರೆ ಬರೆದವರು ಮಹಮ್ಮದ್ ತೊಗಲಕ್‌ಗೆ ಮತ್ತು ಔರಂಗಜೇಬನಿಗೆ ಅನ್ಯಾಯ ಮಾಡಿದ್ದಾರೆ. ಮಹಮ್ಮದ್ ತೊಘಲಕ್ ಏಲು ದೊರೆ ಏನೂ ಅಲ್ಲ, ಆತ ಬುದ್ಧಿವಂತನಾಗಿದ್ದ. ಆದರೆ ಚರಿತ್ರೆ ಬರೆದವರು ಪೂರ್ವಾಗ್ರಹ ಪೀಡಿತರಾದ್ದರಿಂದ ಮಹಮ್ಮದ್ ತೊಗಲಕ್‌ನನ್ನು ಆ ರೀತಿ ವರ್ಣನೆ ಮಾಡಿದ್ದಾರೆ. ಆದ್ದರಿಂದ ತೊಗಲಕ್‌ನನ್ನೇ ಏಕೆ ಉದಾಹರಣೆಯಾಗಿ ತೆಗೆದುಕೊಳ್ಳುತ್ತೀರಿ? ಬೇರೆ ಯಾರನ್ನಾದರೂ ಉದಾಹರಣೆಯಾಗಿ ತೆಗೆದುಕೊಳ್ಳಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಸಕ್ಕರೆ ಉತ್ಪಾದಿಸಲು ಕಬ್ಬು ಬೆಳೆಯುವಂಥ ರೈತರೇ ಬುದ್ಧಿವಂತರು.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಮಹಮ್ಮದ್ ತೊಗಲಕ್ ಇವನು ತನ್ನ ಕಾಲಮಾನಕ್ಕಿಂತಲೂ ಮುಂದಕ್ಕೆ ಯೋಚನೆಯನ್ನು ಮಾಡುತ್ತಿದ್ದವನು ಆಗಿದ್ದ. ಆ ಕಾಲಮಾನವನ್ನು ಅರಿತು ದೆಹಲಿಯಂಥ ಪಟ್ಟಣಗಳ ಮೂಲಕ ರಾಜ್ಯಭಾರ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ದೇವಗಿರಿಗೆ ಬಂದ. ಮತ್ತು ಅವನು ನಾಣ್ಯಗಳನ್ನು ಮುದ್ರಿಸತಕ್ಕಂಥ ವಿಚಾರಗಳನ್ನು ಕಂಡುಹಿಡಿದ. ಆದ್ದರಿಂದ ಅವನು ಹೆಚ್ಚು ಬುದ್ಧಿವಂತನಾದಂಥ ಒಬ್ಬ ರಾಜ. ಬೇರೆಯವರು ಅವನನ್ನು ಅಪಾರ್ಥ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು: ಬೇರೆಯವರಿಗೆ ಅದನ್ನು ಜೀರ್ಣಿಸಿಕೊಳ್ಳಲಿಕ್ಕೆ ಆಗಲಿಲ್ಲವೆಂದು ಅವನನ್ನು ಹುಚ್ಚನನ್ನಾಗಿ ಮಾಡಿಬಿಟ್ಟಿದ್ದಾರೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಯುವುದು, ಅದರಿಂದ ಸಕ್ಕರೆ ಉತ್ಪಾದನೆ ಮಾಡುವುದು ಅದು ಸಮಸ್ಯೆಯಲ್ಲ. ಸಕ್ಕರೆಯನ್ನುಒಂದು ಕಡೆಯಿಂದ ಇನ್ನೊಂದು ಕಡೆ ಸಾಗಾಣಿಕೆ ಮಾಡುವಂಥ ಒಂದು ವೈಜ್ಞಾನಿಕವಾದಂಥ ಚಿಂತನೆಯನ್ನು ಮಾಡಿದಂಥ ಬೃಹಸ್ಪತಿಗಳು ಯಾರೆಂದು ನನಗೆ ಗೊತ್ತಾಗುತ್ತಿಲ್ಲ. ಎಂಥಹ ಮಹಾ ಬೃಹಸ್ಪತಿಗಳು ಎಂದರೆ-ನಿನ್ನೆಯ ದಿವಸ ನಾನು ಪಾಂಡವಪುರ ಸೊಸೈಟಿಗೆ ಹೋಗಿದ್ದಾಗ 750 ರೂಪಾಯಿ ಬಾಡಿಗೆ ಕೊಟ್ಟು ಬೆಳಗಾಂನಿಂದ ಸಕ್ಕರೆ ತರಿಸಬೇಕೆಂದು ಹೇಳಿದರು. ಹತ್ತಿರದಲ್ಲಿಯೇ ಸಕ್ಕರೆ ಕಾರ್ಖಾನೆಯಲ್ಲಿ ಸಕ್ಕರೆ ತಯಾರಾಗುತ್ತಿದ್ದು ಸಂಬಂಧಪಟ್ಟ ಸೊಸೈಟಿಗೆ ಸಕ್ಕರೆ ಬೇಕಾದಾಗ ಅಲ್ಲಿಂದಲೇ ತರಿಸಿಕೊಳ್ಳುವುದನ್ನು ಬಿಟ್ಟು 1,000 ರೂಪಾಯಿಗಳು ಅಥವಾ 750 ರೂಪಾಯಿಗಳನ್ನು ಬಾಡಿಗೆ ಕೊಟ್ಟು ಬೇರೆ ಕಡೆಯಿಂದ ಸಕ್ಕರೆಯನ್ನು ತರಿಸುವುದಕ್ಕೆ ಯಾವುದಾದರೂ ವೈಜ್ಞಾನಿಕ ಆಧಾರವಿದೆಯೇ? ಬಹುಶಃ ಇದು ಕೇಂದ್ರ ಸರ್ಕಾರದ ನೀತಿ ಎಂದು ಹೇಳಬಹುದು. ಈಗ ಪಾಂಡವಪುರ ಸಹಕಾರ

ಸಕ್ಕರೆ ಕಾರ್ಖಾನೆಯಿಂದಲೇ ಪಾಂಡವಪುರದಲ್ಲಿರುವ ಸೊಸೈಟಿಗೆ ಸಕ್ಕರೆ ಅಲಾಟ್‌ಮೆಂಟ್ ಮಾಡಿದರೆ ಏನು? ಅಲಾಟ್‌ಮೆಂಟ್ ಸಿಸ್ಟಮ್ ಏನಿದೆ ಅದು ಅಷ್ಟೊಂದು ಅವೈಜ್ಞಾನಿಕವಾಗಿದೆ. 'ಸೇವ್ ಡೀಸೆಲ್, ಸೇವ್ ಆಯಿಲ್' ಎಂದು ಕರೆ ಕೊಡುತ್ತಾರೆ. ನಾವು ಡೀಸೆಲ್‌ನ್ನು ಎಲ್ಲಿ ಸೇವ್ ಮಾಡುವುದಕ್ಕಾಗುತ್ತದೆ. ಸೇವ್ ಡೀಸೆಲ್ ಸೇವ್ ಆಯಿಲ್' ಎಂದು ಹೇಳಿ 7,500 ರೂಪಾಯಿಗಳನ್ನು ಬಾಡಿಗೆ ಕೊಟ್ಟು ಬೆಳಗಾಂನಿಂದ ಪಾಂಡವಪುರಕ್ಕೆ, ಪಾಂಡವಪುರದಿಂದ ಬೆಳಗಾಂಗೆ ಸಕ್ಕರೆ ಕಳುಹಿಸಿಕೊಡುತ್ತೇವೆ. ಆದ್ದರಿಂದ ಈ ನೀತಿ ಯಾರಿಗೆ ಬರುತ್ತದೋ ಗೊತ್ತಿಲ್ಲ. ಈ ನೀತಿ ತಪ್ಪು ಎನ್ನುವ ಭಾವನೆ ಏನಾದರೂ ಸರ್ಕಾರಕ್ಕೆ ಇದ್ದರೆ ದಯಮಾಡಿ ಮೊದಲು ಈ ನೀತಿಯನ್ನು ಬದಲಾವಣೆ ಮಾಡತಕ್ಕಂಥ ಕೆಲಸ ಮಾಡಬೇಕು. ಸಕ್ಕರೆಗೆ ಸಂಬಂಧಪಟ್ಟಹಾಗೆ ಒಬ್ಬರು ಸಕ್ಕರೆ ಮಂತ್ರಿಗಳಿದ್ದಾರೆ. ವಿಳಂಬ ನೀತಿಯಿಂದ ರೈತರಿಗೆ ಆಗತಕ್ಕಂಥ ಅನ್ಯಾಯವನ್ನು ಅತ್ಯಂತ ತ್ವರಿತವಾಗಿ, ಬಹಳ ಗಂಭೀರವಾಗಿ ಸರ್ಕಾರ ಚಿಂತನೆ ಮಾಡಿ ಆಯಾಯ ಕಾಲಕ್ಕೆ ಕಬ್ಬಿಗೆ ಬೆಲೆ ನಿಗದಿ ಮಾಡಿ, ಕಬ್ಬು ಬೆಳೆಯತಕ್ಕಂಥ ರೈತರಿಗೆ ಆಗತಕ್ಕಂಥ ಶೋಷಣೆಯನ್ನು ಸರಿ ಮಾಡುವ ದಿಕ್ಕಿನಲ್ಲಿ ಕೆಲಸ ಮಾಡಬೇಕು. ರೈತರಿಂದ ಕಬ್ಬು ಮಾಮೂಲಿನಂತೆ ಬರುತ್ತದೆ. ಆದರೆ ಆಡಳಿತದಲ್ಲಿ ಲೋಪದೋಷಗಳಿವೆ. ಹಣವನ್ನು ಲೂಟಿ ಮಾಡತಕ್ಕಂಥ ಕೆಲವು ಕಾರ್ಖಾನೆಗಳಿವೆ. ಅಂಥ ಕಾರ್ಖಾನೆಗಳ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಸಕ್ಕರೆ ಕಾರ್ಖಾನೆಗಳಲ್ಲಿ ಆಗತಕ್ಕಂಥ ನಷ್ಟವನ್ನು ಪೂರ್ತಿಯಾಗಿ ರೈತರ ತಲೆಮೇಲೆ ಏಕೆ ಹಾಕಬೇಕು? ಭ್ರಷ್ಟಾಚಾರ ಎನ್ನುವುದು ಸಮಾಜದ ಒಂದು ಪಾಪದ ಪಿಡುಗು. ಯಾರೋ ಮಾಡಿದ ಭ್ರಷ್ಟಾಚಾರದಿಂದ ಆದಂಥ ನಷ್ಟವನ್ನು ರೈತರೇ ಹೊರಬೇಕಾಗಿದೆ. ಆದ್ದರಿಂದ ಈ ಭ್ರಷ್ಟಾಚಾರವನ್ನು ತಡೆಗಟ್ಟಲು ಏನೇನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಎಂಬುದನ್ನು ಹೇಳಬೇಕು. ಭ್ರಷ್ಟಾಚಾರ ಕಂಡುಬಂದಾಗ ಸಂಬಂಧಪಟ್ಟ ಸಕ್ಕರೆ ಸಚಿವರು ಆಡಳಿತದಲ್ಲಿ ಬದಲಾವಣೆಯನ್ನು ಮಾಡಬೇಕು. ಮಾನ್ಯ ಸಕ್ಕರೆ ಮಂತ್ರಿಗಳು ಬೆಳಗಾಂನಿಂದ ಬಂದವರಾಗಿದ್ದಾರೆ ಇಡೀ ಸಕ್ಕರೆ ವಿಚಾರದಲ್ಲಿ, ಭೂಮಿ ವಿಚಾರದಲ್ಲಿ, ರೈತರ ನೋವಿನಲ್ಲಿ ಎಲ್ಲವೂ ನನಗೆ ಅನುಭವ ಇದೆಯೆಂದು ಹೇಳುತ್ತೀರಿ. ಆದರೆ ಕತ್ತಿ ತೆಗೆದುಕೊಂಡು ರೈತರ ಮೇಲೆ ಹೊಡೆಯುತ್ತೀರಿ. 'ಕತ್ತಿ' ಎನ್ನುವ ಒಳ್ಳೆ ಹೆಸರನ್ನೇ ಇಟ್ಟುಕೊಂಡಿದ್ದೀರಿ.

ಒಬ್ಬ ಸದ್ಯಸರು: ಮಾನ್ಯ ಅಧ್ಯಕ್ಷರೆ, ಎಲ್ಲಾ ಕಾರ್ಖಾನೆಗಳಲ್ಲಿ ಭ್ರಷ್ಟಾಚಾರ ಇದೆಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಎಲ್ಲಾ ಕಾರ್ಖಾನೆಗಳಲ್ಲಿ ಭ್ರಷ್ಟಾಚಾರ ಆಗುವುದಿಲ್ಲ. ಯಾವ ಕಾರ್ಖಾನೆಗಳಲ್ಲಿ ಭ್ರಷ್ಟಾಚಾರ ಆಗುತ್ತಿದೆಯೊ ಅದನ್ನು ಸ್ಪಷ್ಟವಾಗಿ ಹೇಳಬೇಕು. ಮನಸ್ಸಿಗೆ ಬಂದಂತೆ ಎಲ್ಲಾ ಕಡೆ ಭ್ರಷ್ಟಾಚಾರ ಆಗುತ್ತಿದೆ ಎಂದು ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ಕುಂಬಳೆ ಸುಂದರ್‌ರಾವ್: ಮಾನ್ಯ ಅಧ್ಯಕ್ಷರೆ, ಏಕೋ ಸಕ್ಕರೆ ಕಹಿಯಾಗುತ್ತಿದೆ ತಾವು ಸ್ವಲ್ಪ ಸುಧಾರಿಸಿಕೊಳ್ಳಿ.

ಶ್ರೀ ಬಿ.ಬಿ.ಶಿವಕುಮಾರ್ (ಕುರಗೋಡು): ಮಾನ್ಯ ಅಧ್ಯಕ್ಷರೆ, ದಯಮಾಡಿ ನೇರವಾಗಿ ವಿಚಾರಕ್ಕೆ ಮಾನ್ಯ ಪುಟ್ಟಣ್ಣಯ್ಯನವರು ಬರಲಿ. ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಅದರಲ್ಲೂ ರೈತರಿಗೆ ಸೀಮಿತವಾದಂಥ ವಿಚಾರವನ್ನು ಮಾನ್ಯ ಪುಟ್ಟಣ್ಣಯ್ಯನವರು ಬಹಳ ಚೆನ್ನಾಗಿ ಪ್ರಸ್ತಾಪ ಮಾಡುತ್ತಿದ್ದಾರೆ. ಭ್ರಷ್ಟಾಚಾರ, ಅವ್ಯವಹಾರ ಇವು ಏನೇನು ಇವೆ ಅದು ಆಯಾಯ ಕಾರ್ಖಾನೆಗಳಿಗೆ ಬಿಟ್ಟಿರುವಂಥದ್ದಾಗಿದೆ. ನೇರವಾಗಿ ಸರ್ಕಾರದಿಂದ ಏನು ಆಗಬೇಕೋ ಅದನ್ನು ಸ್ಪಷ್ಟವಾಗಿ ಹೇಳಲಿ, ಮಾನ್ಯ ಅಧ್ಯಕ್ಷರೆ, ತಾವು ಮೊದಲೇ ನಿಗದಿಪಡಿಸಿದ ಸಮಯದ ಪ್ರಕಾರ 1 ಗಂಟೆ 30 ನಿಮಿಷದಿಂದ 2 ಗಂಟೆ 30 ನಿಮಿಷದವರೆಗೆ ಭೋಜನ ವಿರಾಮದ ಸಮಯವಾಗಿರುತ್ತದೆ. ಅನಂತರ ಕಾವೇರಿ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಸರ್ವಪಕ್ಷಗಳ ಸಭೆಯನ್ನು ಮಧ್ಯಾಹ್ನ 3 ಗಂಟೆಗೆ ಕರೆದಿದ್ದೀರಿ. ರೈತರು ಬೆಳೆದ ಕಬ್ಬಿಗೆ ಸಂಬಂಧಪಟ್ಟಹಾಗೆ ಇದು ಬಹಳ ಉಪಯುಕ್ತವಾದಂಥ ಚರ್ಚೆಯಾಗಿದೆ. ಮಾನ್ಯ ಸದಸ್ಯರು ಇನ್ನೂ ಸ್ವಲ್ಪ ಹೊತ್ತು ಮಾತನಾಡಿದ ಮೇಲೆ ಸರ್ಕಾರ ಉತ್ತರ ಕೊಡಬೇಕು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಇದು ಅನುಪಯುಕ್ತ ಚರ್ಚೆಯೇ? ಅದು ಅವರಿಗೆ ಅನುಪಯುಕ್ತವಾಗಿರಬಹುದು. ಆದರೆ ಇದು ನಮಗೆ ಉಪಯುಕ್ತ ಚರ್ಚೆಯಾಗಿದೆ.

ಅಧ್ಯಕ್ಷರು: ಅವರು ಇದು ಅನುಪಯುಕ್ತ ಚರ್ಚೆಯೆಂದು ಹೇಳಲಿಲ್ಲ. ಅವರು ಹೇಳಿದ್ದು ಏನೆಂದರೆ-ಇದು ಉಪಯುಕ್ತವಾದಂಥ ಚರ್ಚೆ, ಆದರೆ 1-30 ಗಂಟೆಯಿಂದ ಮಧ್ಯಾಹ್ನ 2-30 ಗಂಟೆಯವರೆಗೆ ಊಟದ ಸಮಯವಾಗಿರುತ್ತದೆ. ಪುನಃ 3 ಗಂಟೆಗೆ ಕಾವೇರಿ ವಿಚಾರದ ಬಗ್ಗೆ ಸರ್ವಪಕ್ಷಗಳ ಸಭೆಯನ್ನು ಕರೆದಿದ್ದೀರಿ, ಆದ್ದರಿಂದ ಇದರ ಬಗ್ಗೆ ಚರ್ಚೆಯನ್ನು ಮತ್ತೆ ಮುಂದುವರಿಸಬಹುದಲ್ಲ' ಎನ್ನುವ ಮಾತನ್ನು ಅವರು ಹೇಳಿದರು.

ಶ್ರೀ ಬಿ.ಬಿ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಪ್ರಸ್ತಾಪವಾಗುತ್ತಿರತಕ್ಕಂಥ ವಿಷಯಕ್ಕೆ ಸಂಬಂಧಪಟ್ಟ ಹಾಗೆ 3 ಜನ ಸಹಿ ಮಾಡಿದವರು ಇದ್ದಾರೆ ಇದು ಪ್ರಾಮುಖ್ಯವಾದಂಥ ವಿಚಾರ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮಾತನಾಡಲು ಕೊಟ್ಟಂಥ ವಿಷಯವನ್ನು ಮೊನ್ನೆ ದಿವಸ ಮುಂದೂಡಿದಿರಿ. ನಾವು ಈಗ ಮಾತನಾಡಲು 20 ನಿಮಿಷಕ್ಕಿಂತ ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಈ ವಿಚಾರದ ಮೇಲಿನ ಚರ್ಚೆಯನ್ನು 2 ಗಂಟೆಯೊಳಗೆ ಮುಗಿಸಕೊಡುತ್ತೇವೆ. ಆನಂತರ ಊಟಕ್ಕೆ ಹೋಗೋಣ.

ಅದಕ್ಕೋಸ್ಕರ ಮಾನ್ಯ ಸದಸ್ಯರು ಮಾತನಾಡಿ ಮುಗಿಸದ ತಕ್ಷಣ ನಮಗೆ 15-20 ನಿಮಿಷ ಸಾಕು.

ಅಧ್ಯಕ್ಷರು: ಪುಟ್ಟಣ್ಣಯ್ಯನವರು ಎಷ್ಟು ಹೊತ್ತಿಗೆ ಮಾತನಾಡಿ ಮುಗಿಸುತ್ತಾರೋ ಗೊತ್ತಿಲ್ಲ. ಅವರ ಜೊತೆಯಲ್ಲಿ ಇನ್ನೂ 2-3 ಜನ ಸದಸ್ಯರು ಮಾತನಾಡುವವರು ಇದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಯಾರ್‍ಯಾರಿಗೆ ಎಷ್ಟೆಷ್ಟು ಹೊತ್ತು ಮಾತನಾಡಲು ಅವಕಾಶ ಕೊಡಬೇಕೆನ್ನುವುದು ಅದು ತಮಗೆ ಬಿಟ್ಟ ವಿಚಾರ. ನಾವಂತೂ 15-20 ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇವೆ. ತಮಗೆ ಏನು ಬೇಕೊ ಅದನ್ನು ತಾವು ತೀರ್ಮಾನ ತೆಗೆದುಕೊಳ್ಳಿ.

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೇ, ನನ್ನ ಸಮಸ್ಯೆ ಏನೆಂದರೆ, ಈಗ ಸಮಯ ಒಂದೂವರೆ ಗಂಟೆಯಾಗಿದೆ. ಮಾನ್ಯ ಪುಟ್ಟಣ್ಣಯ್ಯನವರು ಮಾತನಾಡಿ ಆದಮೇಲೆ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಲು ಇನ್ನಿಬ್ಬರು ಸದಸ್ಯರು ಇದ್ದಾರೆ. ಅವರದು ಚರ್ಚೆ ಆದಮೇಲೆ ತಾವು ಸಹ ಮಾತನಾಡಲು ಕೇಳಿದ್ದೀರಿ. ಈ ಚರ್ಚೆಯನ್ನು 2 ಗಂಟೆಯೊಳಗಾದರೂ ಮುಗಿಸದೇ ಹೋದರೆ, ಆನಂತರ ಊಟಕ್ಕೆ ಹೋಗಿ ಬಂದು ಮಧ್ಯಾಹ್ನದ ಸಭೆ ಮುಗಿಸಿ ಹೋಗುವಷ್ಟರಲ್ಲಿ ತುಂಬಾ ತಡವಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಊಟಕ್ಕೆ ಹೋಗಿ ಬಂದು ಪುನಃ ಸಭೆ ಸೇರುವುದಕ್ಕಾಗುವುದಿಲ್ಲ. ಕಾವೇರಿ ಬಗ್ಗೆ ತಮ್ಮ ಕೊಠಡಿಯಲ್ಲಿ ಸರ್ವಪಕ್ಷಗಳ ಸಭೆ ಇದೆ. ಈಗ ಯಾರ್‍ಯಾರಿಗೆ ಎಷ್ಟೆಷ್ಟು ಸಮಯ ಮಾತನಾಡಬೇಕೆಂದು ತಾವು ಸಮಯವನ್ನು ನಿಗದಿ ಮಾಡಿ. ನಮಗೆ 15-20 ನಿಮಿಷ ಕಾಲಾವಕಾಶ ಕೊಟ್ಟರೆ ನಾವು ನಿಯಮ 69ರ ಅಡಿಯಲ್ಲಿ ಮಾತನಾಡಿ ಮುಗಿಸುತ್ತೇವೆ. ಅದಕ್ಕಿಂತ ಹೆಚ್ಚು ಸಮಯ ನಮಗೆ ಬೇಡ.

ಅಧ್ಯಕ್ಷರು: ಇವತ್ತು ಇದು ಚರ್ಚೆ ಮಾಡಿ ಮುಗಿಸುವುದಕ್ಕೆ ಆಗುತ್ತದೆಯೇ ಎನ್ನುವ ಅನುಮಾನ ನನಗೆ ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಇವತ್ತು ಚರ್ಚೆ ಮಾಡಿ ಮುಗಿಸಬಹುದು. ಸುಮಾರು 2-30 ಗಂಟೆವರೆಗೆ ಸದನವನ್ನು ಮುಂದುವರಿಸೋಣ. ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ನನಗೆ ನನ್ನ ಸಮಸ್ಯೆಯನ್ನೂ ನೋಡಬೇಕಲ್ಲವೇ?

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದಂಥ ವಿಷಯ.

ಅಧ್ಯಕ್ಷರು:- ನಾನು ಪ್ರಮುಖವಾದಂಥ ವಿಷಯವಲ್ಲವೆಂದು ಹೇಳುತ್ತಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ತಾವು ಪೀಠದಲ್ಲಿ ಅಲಂಕರಿಸದಿದ್ದ ದಿವಸ ಶೂನ್ಯ ವೇಳೆಯಲ್ಲಿ ಒಂದು ವಿಷಯದ ಮೇಲೆ 1 ಗಂಟೆಯ ಕಾಲ ಚರ್ಚೆ ಆಯಿತು. ನಾನು ಹೇಳುವುದೇನೆಂದರೆ - ಇದು ಎರಡನೇ ಬಾರಿ ಮುಂದೆ ಹೋಗಿದೆ. ಇದು ಬಹಳ ಪ್ರಮುಖವಾದಂಥ ವಿಷಯವಾಗಿದೆ. ಅದಕ್ಕೋಸ್ಕರ ಈ ವಿಷಯದ ಮೇಲೆ ಮಾತನಾಡಲು ನಮಗೆ 15-20 ನಿಮಿಷ ಅವಕಾಶ ಕೊಟ್ಟರೆ ಸಾಕು. ಎಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಇದರ ಮೇಲೆ ತಮಗೆ ಬಿಟ್ಟಿದ್ದು. ನಮ್ಮ ವಿಷಯ ಬಂದಕೂಡಲೇ ಅದಕ್ಕೆ ಇನ್ನು ಏನಾದರೂ ಕಾರಣಗಳು ಬರುವುದಾದರೆ ನನ್ನದು ಅಭ್ಯಂತರವಿಲ್ಲ.

ಅಧ್ಯಕ್ಷರು: ಅಯ್ಯೋ, ಹಾಗೇನೂ ಇಲ್ಲ. ಏಕೆ ಹಾಗೆ ಮಾತನಾಡುತ್ತೀರಿ? ಎಲ್ಲಾ ಪಕ್ಷದ ಸದಸ್ಯರನ್ನೂ ಒಂದೇ ರೀತಿಯಾಗಿ ನಡೆಸಿಕೊಂಡು ಹೋಗುತ್ತಿದ್ದೇನೆ.

ಶ್ರೀ ವಿ.ಎಸ್.ಕೌಜಲಗಿ: ಮಾನ್ಯ ಅಧ್ಯಕ್ಷರೆ, ತಾವು ಸದನವನ್ನು ಮಧ್ಯಾಹ್ನ ಒಂದೂವರೆ ಗಂಟೆಗೆ ಮುಂದೂಡುವುದು ಒಳ್ಳೆಯದು. ಏಕೆಂದರೆ ಮಧ್ಯಾಹ್ನ 3-00 ಗಂಟೆಗೆ ತಮ್ಮ ಕೊಠಡಿಯಲ್ಲಿ ಕಾವೇರಿ ಬಗ್ಗೆ ಸರ್ವಪಕ್ಷಗಳ ಸಭೆಯನ್ನು ಕರೆದಿದ್ದೀರಿ. ಈಗ ಪ್ರಸ್ತಾಪವಾಗುತ್ತಿರುವ ವಿಷಯ ಪ್ರಮುಖವಾಗಿರುವುದರಿಂದ ಪುನಃ ಚರ್ಚೆಗೆ ತೆಗೆದುಕೊಳ್ಳಬಹುದು.

ಶ್ರೀ ಬಿ.ಬಿ.ಶಿವಕುಮಾರ್: ಮತ್ತೆ ಸೋಮವಾರ ಹೊಸದಾಗಿ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ. ಇದು ಬಹಳ ಪ್ರಾಮುಖ್ಯವಾದ ವಿಚಾರ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಸೋಮವಾರ ಬೇರೆ ವಿಷಯಗಳು ಇವೆ.

ಅಧ್ಯಕ್ಷರು: ಬೇರೆ ವಿಷಯಗಳು ಸಾವಿರ ಇರಬಹುದು. ಇದು ನಾನು ಪಕ್ಷದ ನಾಯಕರಲ್ಲಿ ಮಾಡಿಕೊಂಡಿರುವ ಕಮಿಟ್‌ಮೆಂಟ್, ತಮ್ಮದು ಆದಮೇಲೆ ಈ ವಿಷಯದ ಮೇಲೆ ಮಾತನಾಡುವವರು ಯಾರಿದ್ದಾರೆ? ಶ್ರೀರಾಮರೆಡ್ಡಿಯವರೆ, ನಿಮಗೇನು ಕಬ್ಬು ಇಲ್ಲ ಏನು ಇಲ್ಲ, ನೀವು ಏತಕ್ಕ ಮಾತನಾಡುತ್ತೀರಿ?

ಶ್ರೀ ಉಮೇಶ್ ವಿ.ಕತ್ತಿ: ನಾನು ಉತ್ತರ ಕೊಟ್ಟಮೇಲೆ ಮಾನ್ಯ ಸದಸ್ಯರು ಯಾರಾದರೂ ಕ್ಲಾರಿಫೀಕೇಷನ್ ಕೇಳುವವರಿದ್ದರೆ ಕೇಳಲಿ. ಇನ್ನು 20 ನಿಮಿಷದಲ್ಲಿ ಇದು ಮುಗಿಯಬಹುದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಕಬ್ಬಿನದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಷಯ. ಇದು ಬರೀ ಒಂದು ಕ್ಷೇತ್ರದ್ದು ಅಲ್ಲ.

ಅಧ್ಯಕ್ಷರು: ಮಾನ್ಯ ಪುಟ್ಟಣ್ಣಯ್ಯನವರು ಎರಡು ನಿಮಿಷದಲ್ಲಿ ಮುಗಿಸುತ್ತಾರೆ. ಅದಾದಮೇಲೆ ನಿಮಗೆ 5 ನಿಮಿಷ. ಬೆಲ್ಲದ್ ಅವರೆ, ಸಮಯದ ಅಭಾವ ಇರುವುದಿಂದ ತಮ್ಮ ಪರವಾಗಿ ತಮ್ಮ ನಾಯಕರು ಮಾತನಾಡುತ್ತಾರೆ. ತಾವು ನನ್ನ ಅತ್ಯಂತ ಆತ್ಮೀಯ ಗೆಳೆಯರಿದ್ದೀರಿ, ಆಮೇಲೆ ಹೇಳಿದರೂ ನಡೆಯುತ್ತದೆ. ಆದರೂ ತಮಗೆ ಕೊನೆಗೆ ಒಂದು ನಿಮಿಷ ಕೊಡುತ್ತೇನೆ. ತಮ್ಮದು ಆದ ಮೇಲೆ ಕ್ಲೋಸ್ ಮಾಡೋಣ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಸರ್ಕಾರದ ಉದ್ದೇಶ ಏನಿದೆ ಎಂದರೆ ಯಾರ ಮೇಲೋ ವೈಯಕ್ತಿಕವಾಗಿ ಭ್ರಷ್ಟಾಚಾರದ ಆಪಾದನೆಯನ್ನು ಹೇರಲಿಲ್ಲ. ಇನ್ ಎಫಿಷಿಯನ್ಸಿಗೆ ಯಾರು ಕಾರಣ? ಯಾರು ಯಾರು ಹೊಣೆಗಾರರು? ಕನಿಷ್ಟ ಏನಾದರೂ ನಿಯಮಾವಳಿಗಳನ್ನು ಮಾಡಿ. ಮ್ಯಾನೇಜಿಂಗ್ ಡೈರೆಕ್ಟರನ್ನು ತೆಗೆದುಹಾಕುತ್ತೇವೆಂದು ಹೇಳುವುದು, 3-4 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಹೇಳುವುದು, ಇದಕ್ಕೆಲ್ಲ ಯಾರು ಜವಾಬ್ದಾರರು? ಯಾವುದಾದರೂ ಒಂದು ಕಾನೂನು ತನ್ನಿ. ನಾವೆಲ್ಲ ಒಪ್ಪಿಗೆ ಕೊಡುತ್ತೇವೆ. ಸುಮ್ಮನೆ ದುಡ್ಡು ಹೊಡೆದುಕೊಂಡು ಹೋಗುತ್ತಿರುತ್ತಾರೆ. ಅದನ್ನೆಲ್ಲ ತಿರುಗ ರೈತರು ಕಟ್ಟಬೇಕು. ಮುಂದಕ್ಕೆ ದರ ಕಡಿಮೆ ಕೊಡುತ್ತೀರಿ. ಈ ಇನ್ ಎಫಿಷಿಯನ್ಸಿಗೆ ಯಾರು ಹೊಣೆ? ನಾವಲ್ಲ ಹೊಣೆ. ತಾವು ದಯವಿಟ್ಟು ಇದಕ್ಕೆ ಯಾರನ್ನಾದರೂ ಹೊಣೆಗಾರರನ್ನು ಮಾಡಬೇಕು. ಆದುದರಿಂದ ತಾವೇ ಮುಖ್ಯವಾಗಿ ಕೆಲವು ವಿಷಯಗಳನ್ನು ಬಹಳ ಜವಾಬ್ದಾರಿಯುತವಾಗಿ ನಿರ್ವಹಿಸಬೇಕು. ಇದು ಒಂದೆರಡು ಸಾವಿರ ಕೋಟಿ ರೂಪಾಯಿಗಳ ಕಬ್ಬಿನ ವಿಷಯ. ಈಗಾಗಲೇ ಎರಡು ವರ್ಷಗಳಿಂದ ನಷ್ಟವಾಗಿದೆ, ನಾಶವಾಗಿದೆ. ರಾಜ್ಯದಲ್ಲಿ ಕಬ್ಬಿನ ಬೆಳೆ ಕಡಿಮೆಯಾಗಿದೆ. ರೈತರು ಅತ್ಯಂತ ಕಷ್ಟದಲ್ಲಿದ್ದಾರೆ. ಸರ್ಕಾರ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಮುಖ್ಯ ವಿಷಯಗಳನ್ನು ಮಾನ್ಯ ಪುಟ್ಟಣ್ಣಯ್ಯನವರು ಪ್ರಸ್ತಾಪ ಮಾಡಿದ್ದಾರೆ. ಈಗ 31 ಕೋಟಿ 64 ಲಕ್ಷ ರೂಪಾಯಿಗಳನ್ನು ರೈತರಿಗೆ ಕೊಡಬೇಕಾದುದು ಬಾಕಿ ಇದೆ. ಇದಕ್ಕೆ ಯಾರು ಕಾರಣ? ಇದಕ್ಕೆ ಸಕ್ಕರೆ ಕಾರ್ಖಾನೆಗಳು ಕಾರಣ ಎಂದು ಸರ್ಕಾರ ಹೇಳುತ್ತಿದೆ. ಈ ಸರ್ಕಾರಕ್ಕೆ ಸಕ್ಕರೆ ಕಾರ್ಖಾನೆಗಳ ಮೇಲೆ ಏನಾದರೂ ಹಿಡಿತ ಇದೆಯೇ ಇಲ್ಲವೆ? ನನ್ನ ಪ್ರಕಾರ ಈ ಸರ್ಕಾರಕ್ಕೆ ಆ ಕಾರ್ಖಾನೆಗಳ ಮೇಲೆ ಯಾವುದೇ ರೀತಿಯ ಹಿಡಿತ ಅಥವಾ ಹತೋಟಿ ಇಲ್ಲ. ನಿನ್ನೆ ನಾನು ಒಂದು ಪ್ರಶ್ನೆ ಕೇಳಿದ್ದೆ, ಅದಕ್ಕೆ ಲಿಖಿತ ಮೂಲಕ ಉತ್ತರ ಬಂದಿದೆ. ಅದು ಆಶ್ಚರ್ಯಕರವಾದ ರೀತಿಯಲ್ಲಿ ಉತ್ತರ ಕೊಟ್ಟಿದ್ದಾರೆ. ಸಕ್ಕರೆ ಕಾರ್ಖಾನೆಗಳಲ್ಲಿ ಎಷ್ಟೆಷ್ಟು ನಷ್ಟವಾಗಿದೆ ಎಂದು ಪಟ್ಟಿ ಕೊಟ್ಟಿದ್ದಾರೆ. ಅದನ್ನೆಲ್ಲ ನಾನು ಇಲ್ಲಿ ಓದುವುದಿಲ್ಲ. ಆದರೆ ಎಲ್ಲಾ ಕಾರ್ಖಾನೆಗಳು ನಷ್ಟದಲ್ಲಿವೆಯೇ ಅಥವಾ ಮುಖ್ಯವಾಗಿ ಯಾವ ಕಾರ್ಖಾನೆಗಳು ನಷ್ಟದಲ್ಲಿದೆ ಎಂಬುದನ್ನು ಹೇಳಬೇಕು.

ಕಾರ್ಖಾನೆಗಳು ನಷ್ಟಕ್ಕೊಳಗಾದರೆ ರೈತರ ಮೇಲೆ ಏತಕ್ಕೆ ಅದನ್ನು ಹೇರಬೇಕು? ಆ ನಷ್ಟಕ್ಕೆ ರೈತರು ಕಾರಣಕರ್ತರಾಗಿದ್ದಾರೆಯೆ? ಕಾರ್ಖಾನೆಗಳು ಅನುಭವಿಸತಕ್ಕ ನಷ್ಟಕ್ಕೆ ರೈತರು ಕಾರಣಕರ್ತರು ಅಲ್ಲ. ಆ ನೆಪದಲ್ಲಿ ಕಾರ್ಖಾನೆಗಳು ಇವತ್ತು ಕೊಡತಕ್ಕ ಬಾಕಿಯನ್ನು ಸಂಪೂರ್ಣವಾಗಿ ನಿಲ್ಲಿಸಿ ಇಡೀ ರಾಜ್ಯದಲ್ಲಿ ರೈತರು ಬದುಕುವುದಕ್ಕೆ ಆಧಾರವಾಗಿರತಕ್ಕ ರೈತರ ಜೀವನದ ಜೊತೆ ಇವರು ಚೆಲ್ಲಾಟವಾಡುತ್ತಿದ್ದಾರೆ. ಇದಕ್ಕೆ ಸರ್ಕಾರ ನಿರ್ದಿಷ್ಟವಾದ ಕಾನೂನು ಮಾಡಿ. ಸಕ್ಕರೆ ಕಾರ್ಖಾನೆಗೆ ಕಷ್ಟವಾಗುತ್ತದೋ ಬಿಡುತ್ತದೋ ಅದು ಬೇರೆ ಪ್ರಶ್ನೆ. ಇದರ ಬಗ್ಗೆ ಕೇಂದ್ರ ಸರ್ಕಾರ ಹೊರಡಿಸಿರತಕ್ಕ ಗೈಡ್‌ಲೈನ್ಸ್ ಇದೆ. ಅದನ್ನೆಲ್ಲ ನಾನು ಓದುವುದಕ್ಕೆ ಹೋಗುವುದಿಲ್ಲ. ಸರ್ಕಾರ ಜವಾಬ್ದಾರಿ ತೆಗೆದುಕೊಂಡು ರೈತರಿಗೆ ಬರಬೇಕಾದ ಬಾಕಿಯನ್ನು ತಕ್ಷಣ ಪಾವತಿ ಮಾಡಿಸಬೇಕು. ಇದಕ್ಕೆ ಸರ್ಕಾರ ಜವಾಬ್ದಾರಿ ತೆಗೆದುಕೊಳ್ಳಬೇಕು. ಬೇರೆಯವರು ಜವಾಬ್ದಾರಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅದೇ ರೀತಿಯಲ್ಲಿ 'Minimum Price to Producer of Sugarcane' ಎಂಬ ನಿಯಮ ಇದೆ. 1986ರ ಈ ನಿಯಮ 1978ರವರೆಗೆ ತಿದ್ದುಪಡಿಯಾಗಿದೆ. ಈ ನಿಯಮದ ಪ್ರಕಾರ ಕನಿಷ್ಟ ಇಷ್ಟು ಎಂದು ನಿಗದಿ ಮಾಡಬೇಕೆಂದು ಹೇಳತಕ್ಕ ತೀರ್ಮಾನ ಇದೆ. ಈ ತೀರ್ಮಾನದ ಬಗ್ಗೆ ರಾಜ್ಯ ಸರ್ಕಾರ ಜವಾಬ್ದಾರಿ ತೆಗೆದುಕೊಂಡು ತಾವೇ ರೂಪಿಸಿರತಕ್ಕ ನಿಯಮಾವಳಿ ಪ್ರಕಾರ ರೈತರಿಗೆ ಕೊಡಬೇಕಾದ ದರವನ್ನು ಕೊಡಿಸಲಿಕ್ಕೆ ಇವತ್ತು ಸರ್ಕಾರ ವಿಫಲವಾಗಿದೆ. ನಮ್ಮ ಜಿಲ್ಲೆಯ ಗೌರಿಬಿದನೂರಿನಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಆ ಸಕ್ಕರೆ ಕಾರ್ಖಾನೆಯಲ್ಲಿ ರೈತರಿಗೆ ಏನು ಕನಿಷ್ಟದರ ಕೊಡಬೇಕು ಅದರ ಪ್ರಕಾರ ಯಾವತ್ತೂ ಕೊಟ್ಟಿಲ್ಲ. ಈ ವಿಚಾರವನ್ನು ನಾವು ಸಾಕಷ್ಟು ಸಲ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಹಿಂದೆ ಇದ್ದ ಮಾನ್ಯ ಸಕ್ಕರೆ ಸಚಿವರಿಗೂ ಹೇಳಿದ್ದೇವೆ. ನಾನು ಮತ್ತು ಈ ಮನೆಯ ಸದಸ್ಯರಾದ ಶ್ರೀಮತಿ ಜ್ಯೋತಿರೆಡ್ಡಿಯವರು ಹೋಗಿ ಅವರ ಜೊತೆ ಚರ್ಚೆ ಮಾಡಿದ್ದೇವೆ. ಯಾವುದೂ ಇಂಪ್ಲಿಮೆಂಟ್ ಮಾಡಲಿಲ್ಲ. ಈ ರಾಜ್ಯದಲ್ಲಿ ಹೆಚ್ಚಿನ ಕಾರ್ಖಾನೆಗಳು ಅದೇ ರೀತಿಯಲ್ಲಿ ಇರತಕ್ಕ ಪರಿಸ್ಥಿತಿ ಇದೆ. ಹೀಗಾಗಿ ಮೂರು ವಿಧಾನದಲ್ಲಿ ರೈತರು ಕಾರ್ಖಾನೆಯವರಿಂದ ಶೋಷಣೆಗೆ ಒಳಗಾಗಿದ್ದಾರೆ. ಒಂದು ಅವರೇ ರೂಪಿಸಿರತಕ್ಕ ಕಾನೂನಿನ ಪ್ರಕಾರ ದರ ನಿಗದಿ ಮಾಡುತ್ತಿಲ್ಲ. ಕನಿಷ್ಟ ದರ ಎಂದು ಏನಿದೆ ಅದನ್ನು ಸರ್ಕಾರ ಸ್ಟ್ರಿಕ್ಟ್ ಆಗಿ ಯಾವುದೇ ಮುಲಾಜಿಲ್ಲದೆ ಜಾರಿ ಮಾಡಬೇಕು. ಎರಡು, ಕಾರ್ಖಾನೆಗಳು ಅನುಭವಿಸತಕ್ಕ ನಷ್ಟಕ್ಕೆ ರೈತರನ್ನು ಹೊಣೆಗಾರರನ್ನಾಗಿ ಮಾಡಬಾರದು. ರೈತರಿಗೆ ಬರಬೇಕಾದ ಬಾಕಿ ಏನಿದೆ ಅದನ್ನು ಸರ್ಕಾರ ತಕ್ಷಣ ಬಡ್ಡಿಸಹಿತ ಕೊಡಿಸಬೇಕು ಎಂದು ಅಗ್ರಿಮೆಂಟಿನಲ್ಲಿದೆ, ರೂಲ್ಸ್‌ನಲ್ಲಿದೆ, ರೇಟ್ ಹೆಚ್ಚು ಕಡಿಮೆ ಆದಾಗ ಪೇಮೆಂಟ್ ಡಿಲೇ ಆದಾಗ 15 ಪರ್ಸೆಂಟ್ ಬಡ್ಡಿ ಕೊಡಬೇಕೆಂದು ರೂಲ್ 3 (ಎ) ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಶೇಕಡ 15 ರಷ್ಟು ವಾರ್ಷಿಕ ಬಡ್ಡಿಯನ್ನು ಕೊಡಬೇಕು ಅದನ್ನು ಬಿಡಬೇಕಾದರೆ, ಬಡ್ಡಿ ಸಹಿತ ಆ ಹಣವನ್ನು ಕೊಡಬೇಕು. ಅದರ ಜೊತೆಗೆ ಗ್ಯಾಟ್ ಒಪ್ಪಂದ ಜಾರಿಗೆ ಬಂದಮೇಲೆ ಸಕ್ಕರೆ ಆಮದು ಹೆಚ್ಚು ಮಾಡುತ್ತಿದ್ದಾರೆ. ಅದರ ಬಗ್ಗೆ

ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ್ದಾರೆ. ಅದರಲ್ಲಿ ಹೇಗಾಗಿದೆ ಎಂದರೆ ಬೀಟ್ ಷುಗರ್ ಸಪ್ಲೈ ಮಾಡಿದರು. ಒರಿಜಿನಲ್ ಷುಗರ್ ಒಂದು ಕೆ.ಜಿ.ಗೆ 3 ಕೆ.ಜಿ.ಬೀಟ್ ಷುಗರ್ ಸಮಾನ ಇಂಥ ಹುಲುಸು ಸಕ್ಕರೆ ನಮ್ಮ ದೇಶದಲ್ಲಿದ್ದರೂ ಕೂಡ ಅದನ್ನು ತೆಗೆದುಕೊಂಡು ಬರುತ್ತಿದ್ದಾರೆ. ಈ ಕಾರಣದಿಂದ ನಾನು ಹೇಳಿದ 3 ಅಂಶಗಳನ್ನು ತಕ್ಷಣ ಜಾರಿಗೆ ತರಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

+ ಶ್ರೀ ಚಂದ್ರಕಾಂತ ಜಿ.ಬೆಲ್ಲದ್: (ಧಾರವಾಡ):- ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ನಿಯಮ 69ರ ಪ್ರಕಾರ ಈ ಕಬ್ಬು ಬೆಳೆಯುತ್ತಿರುವ ರೈತರ ಸಲುವಾಗಿ ಮಾನ್ಯ ಸಕ್ಕರೆ ಮಂತ್ರಿಗಳಿಗೆ ಈಗಾಗಲೇ ಶ್ರೀ ಪುಟ್ಟಣ್ಣಯ್ಯನವರು ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ನಮ್ಮ ಸರ್ಕಾರ ಸಕ್ಕರೆಗೆ ಪ್ರತ್ಯೇಕವಾಗಿ ಒಬ್ಬ ಮಂತ್ರಿಯನ್ನು ಮಾಡಿದ್ದಾರೆ. ಆ ಮಂತ್ರಿಯವರು ಕಬ್ಬು ಬೆಳೆಯುವ ಪ್ರದೇಶದಿಂದ ಬಂದಂತಹ ಮಂತ್ರಿಗಳಾಗಿದ್ದಾರೆ, ಮತ್ತು ಆ ಜಿಲ್ಲೆಯೂ ಸಹ ರಾಜ್ಯದಲ್ಲಿ ಹೆಚ್ಚು ಕಬ್ಬು ಬೆಳೆಯುವಂತ ಜಿಲ್ಲಾ ಪ್ರದೇಶವಾಗಿದ್ದು, ಆ ಪ್ರದೇಶದಿಂದ ಬಂದಂತಹ ಶ್ರೀ ಕತ್ತಿಯವರು ಇವತ್ತಿನ ದಿವಸ ಈ ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಬೆಳೆಯುತ್ತಿರುವ ರೈತರಿಗೆ ಅನೇಕ ವರ್ಷಗಳಿಂದ ಅಂದರೆ ಸಾಧಾರಣ 3 ವರ್ಷಗಳಿಂದ ರೈತರು ಕೊಟ್ಟ ಕಬ್ಬಿಗೆ ಕೊಡಬೇಕಾದ ಹಣವನ್ನು ಕೊಟ್ಟಿಲ್ಲವೆಂಬುದು ಈಗಾಗಲೇ ಮಾನ್ಯ ಮಂತ್ರಿಗಳ ಮತ್ತು ಸರ್ಕಾರದ ಗಮನಕ್ಕೆ ಬಂದಿದೆ ಎಂಬ ವಿಚಾವರನ್ನು ಇವತ್ತು ಮತ್ತೆ ಒತ್ತಾಯ ಮಾಡಿ ಹೇಳಬೇಕಾಗಿದೆ. ಇವತ್ತು ಹತ್ತು ಸಾವಿರಕ್ಕಿಂತ ಹೆಚ್ಚು ಜನ ಕಬ್ಬು ಕೊಟ್ಟ ರೈತರಿಗೆ ಅನೇಕ ಸಕ್ಕರೆ ಕಾರ್ಖಾನೆಗಳು ಅವರ ಹಣವನ್ನು ಪಾವತಿ ಮಾಡಲಿಲ್ಲ. ಈ ಸಕ್ಕರೆ ಕಾರ್ಖಾನೆಗಳು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ, ಸಾವಿರಾರು ಕೋಟಿ ರೂಪಾಯಿ ರೈತರಿಗೆ ಕೊಡಬೇಕಾದ ಹಣವನ್ನು ಸರಿಯಾದ ವೇಳೆಗೆ ಕೊಡದೆ ಇದ್ದುದರಿಂದ ಬಹಳಷ್ಟು ಸಂಕಷ್ಟದಲ್ಲಿ ರಾಜ್ಯದ ರೈತರು ಮುಖ್ಯವಾಗಿ ಕಬ್ಬು ಬೆಳೆಯುತ್ತಿರುವ ರೈತರು ಸಿಲುಕಿದ್ದಾರೆಂಬುದನ್ನು ಸರ್ಕಾರದ ಗಮನಕ್ಕೆ ಮತ್ತು ತಮ್ಮ ಮೂಲಕ ಮಾನ್ಯ ಸಕ್ಕರೆ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಕೇಂದ್ರ ಸರ್ಕಾರ ಇವತ್ತು ಇದರ ಬೆಲೆಯನ್ನು ನಿಗದಿ ಮಾಡುತ್ತದೆ.

ಶ್ರೀ ಡಿ.ಬಿ.ಇನಾಂದಾರ್: ಮಾನ್ಯ ಬೆಲ್ಲದ್‌ರವರು ಯಾವ ಸಕ್ಕರೆ ಕಾರ್ಖಾನೆ ರೈತರಿಗೆ ಸರಿಯಾದ ದರ ಕೊಟ್ಟಿಲ್ಲವೆಂಬುದನ್ನು ಹೇಳಬೇಕು.

ಶ್ರೀ ಚಂದ್ರಕಾಂತ್ ಜಿ.ಬೆಲ್ಲದ್: ಮಲಪ್ರಭ ಸಕ್ಕರೆ ಕಾರ್ಖಾನೆಯಲ್ಲಿ ಇವರು ಇದ್ದಾರೆ. ದೂದ್‌ಗಂಗಾ ಸಕ್ಕರೆ ಕಾರ್ಖಾನೆಗೆ ನಾವಿದ್ದೇವೆ. ನಾವು ಬೇಕಾದರೆ ರೈತರಿಗೆ ಯಾವ ರೀತಿ ಬಿಲ್ ಕೊಟ್ಟಿದ್ದಾರೆಂಬುದನ್ನು ಸ್ಪಷ್ಟವಾಗಿ ಹೇಳುತ್ತೇವೆ. ಜನರಲ್ ಆಗಿ ರೈತರಿಗೆ ದರ ಕೊಟ್ಟಿಲ್ಲವೆಂದರೆ ನಾವು ಒಪ್ಪಿಕೊಳ್ಳಬೇಕೆ?

(ಗೊಂದಲ)

1.40 ಪಿ.ಎಂ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಂತ್ರಿಗಳು ಉತ್ತರ ಕೊಡುತ್ತಾರೆ, ಇವರೇಕೆ ಉತ್ತರ ಕೊಡಲು ಹೊರಟಿದ್ದಾರೆ?

(ಗೊಂದಲ)

ಅಧ್ಯಕ್ಷರು:- ಅವಕಾಶ ಕೊಡುತ್ತೇನೆ. ನನಗೆ ಒಂದೊಂದು ಸಲ ಅನುಮಾನ ಬರುತ್ತದೆ, ನಮ್ಮ ಸಭೆಯಲ್ಲಿ ಗದ್ದಲವಾಗುವುದಿಲ್ಲವೆಂದು ಬೇಸರಪಟ್ಟುಕೊಳ್ಳುತ್ತೇನೆ. ಈಗ ಸಭೆ ತರಹ ಮಾಡಿದಿರಿ, ನನಗೆ ಅದಕ್ಕಾಗಿ ಖುಷಿ ಆಗುತ್ತದೆ. ಅವರು ಹೇಳುತ್ತಿದ್ದಾರಲ್ಲಾ, ಕೇಳಿ.

(ಗೊಂದಲ)

ಶ್ರೀ ಚಂದ್ರಕಾಂತ್ ಜಿ.ಬೆಲ್ಲದ್:- ನಾನು ಎಲ್ಲಾ ಇವರದ್ದೇ ಕಾರ್ಖಾನೆ ಎಂದು ಏನೂ ಹೇಳಿಲ್ಲ. ಕರ್ನಾಟಕ ರಾಜ್ಯದಲ್ಲಿ ಬಹುತೇಕ ಸಕ್ಕರೆ ಕಾರ್ಖಾನೆಗಳು ಇವತ್ತು ಸರಿಯಾಗಿ ಹಣ ಪಾವತಿ ಮಾಡಿಲ್ಲ.

ಅಧ್ಯಕ್ಷರು:- ಪ್ರಕಾಶ್ ಏನು ಹೇಳುತ್ತಾರೋ ಕೇಳೋಣ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ:- ನಾನು ದೂದ್‌ಗಂಗಾ ಕಾರ್ಖಾನೆಯ ಬಗ್ಗೆ.

ಶ್ರೀ ಬಿ.ಎನ್.ಬಚ್ಚೇಗೌಡ:- ರೈತರಿಗೆ ಹಣವನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ.

ಶ್ರೀ ಉಮೇಶ್ ವಿ.ಕತ್ತಿ:- ಅದಕ್ಕೆ ಮೊದಲು 4-5 ನಷ್ಟದಲ್ಲಿವೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ:- 1996-97ನೇ ಸಾಲಿಗೆ 600-00 ರೂಪಾಯಿಗಳ ಬಿಲ್ ಕೊಟ್ಟಿದ್ದಾರೆ. ಅಡ್ವಾನ್ಸ್ 200 ರೂಪಾಯಿ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಿಮಗೂ ಅವಕಾಶ ಮಾಡಿಕೊಡುತ್ತಾರೆ. ಆಗ ನೀವು ಏನು ಹೇಳಬೇಕೋ ಅದನ್ನು ಹೇಳಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಮಾನ್ಯ ಸಭಾಧ್ಯಕ್ಷರೆ, ನಾನು ಹೇಳುತ್ತಿರುವುದು ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎಂದೆಲ್ಲಾ ಮಾತನಾಡುತ್ತಿಲ್ಲ. ಒಟ್ಟಾರೆ, ಕಬ್ಬಿಗೆ ಒಂದು ವೈಜ್ಞಾನಿಕ ಬೆಲೆ ನಿಗದಿಯಾಗಬೇಕು.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಬೆಲ್ಲದರವರು ಎದ್ದ ಕೂಡಲೇ, ಸಕ್ಕರೆಯವರು ಏಳುತ್ತಾರೆ.

ಶ್ರೀ ಕೆ.ಎಸ್.ಪಟ್ಟುಣ್ಣಯ್ಯ:- ಬೆಲ್ಲದ್ ಎಂದು ಹೆಸರಿನ ಮೇಲೆ ಜಗಳ ಮಾಡುತ್ತಿದ್ದೀರಿ.

ಅಧ್ಯಕ್ಷರು:- ಹೌದು ಬೆಲ್ಲದ್ ನೀವೇಕೆ ಸಕ್ಕರೆಯದ್ದು ಮಾತನಾಡುತ್ತೀರಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅದು ಸಕ್ಕರೆ, ಇದು ಖಂಡಸಾರಿ ಸಕ್ಕರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಜಗಳ ಇರುವುದು ಬೆಲ್ಲಕ್ಕೆ, ಸಕ್ಕರೆಗೆ.

ಶ್ರೀ ಚಂದ್ರಕಾಂತ್ ಜಿ.ಬೆಲ್ಲದ್:- ಕಬ್ಬು ಬೆಳೆದಂತಹ, ಸಕ್ಕರೆ ಕೊಡಬೇಕಾದ ರೈತರು ಕಹಿ ಅನುಭವವನ್ನು ಅನುಭವಿಸುತ್ತಿದ್ದಾರೆ.

ಅಧ್ಯಕ್ಷರು: ಚಂದ್ರಕಾಂತ್ ಬೆಲ್ಲದ್‌ರವರು ಮಾತನಾಡಲಿ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ನಾವು ಸಕ್ಕರೆ ಕಾರ್ಖಾನೆಯ ರೈತರುಗಳಿಂದ ಆರಿಸಿ ಬಂದಿರುವುದು, ನಾವು ಬೆಲೆ ಕೊಡಲಿಲ್ಲವೆಂದರೆ, ನಾವು ಒಂದು ನಿಮಿಷವೂ ಅಲ್ಲಿ ನಿಲ್ಲುವುದಿಲ್ಲ. ರೈತರಿಗೆ ಬೆಲೆ ಕೊಡಲಿಕ್ಕೆ ಮಾತ್ರ ಆರಿಸಿ ಬಂದಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಿಮ್ಮ ಮೇಲೆ ನಾವು ಹೇಳುತ್ತಿಲ್ಲ ಅಂಕಿಅಂಶಗಳಿದೆ. ಯಾವುದೋ ಕಾರ್ಖಾನೆ ನಷ್ಟದಲ್ಲಿರಬಹುದು, ನೀವು ಚೆನ್ನಾಗಿ ನಡೆಸುತ್ತಿರಬಹುದು ಎಂದರೆ ಅದರ ಅರ್ಥ ಇಡೀ ರಾಜ್ಯದಲ್ಲಿರುವ ಎಲ್ಲಾ ಕಾರ್ಖಾನೆಗಳೂ ಸರಿಯಾಗಿವೆ ಎಂದರ್ಥವೇನಲ್ಲ.

ಶ್ರೀ ಚಂದ್ರಕಾಂತ್ ಜಿ.ಬೆಲ್ಲದ್: ಇವರು ಸರಿಯಾಗಿ ಬೆಲೆ ಕೊಟ್ಟಂತಹವರಿಗೆ, ಸರಿಯಾದ ವೇಳೆಗೆ ರೈತರಿಗೆ ಹಣವನ್ನು ಪಾವತಿ ಮಾಡಿದಂತಹವರಿಗೆ, ಆ ರೈತ ಅವರನ್ನು ಆರಿಸಿಯೇ ಆರಿಸುತ್ತಾನೆ. ಇವರಿಗೆ ಆ ಪ್ರಶ್ನೆ ಬರುವುದಿಲ್ಲ. ಯಾರು ಚೆನ್ನಾಗಿ ನಡೆಸುತ್ತಿದ್ದಾರೆ, ಚೆನ್ನಾಗಿ ಬೆಲೆ ಕೊಡುತ್ತಿದ್ದಾರೆ, ಸರಿಯಾದ ವೇಳೆಗೆ ಅವರು ಹಣವನ್ನು ಮರುಪಾವತಿ ಮಾಡುತ್ತಾರೋ ಅವರಿಗೆ ಈ ಪ್ರಶ್ನೆ ಬರುವುದಿಲ್ಲ. ಸಕ್ಕರೆ ಕಾರ್ಖಾನೆಗಳು ಹಣವನ್ನು ಇನ್ನೂವರೆಗೆ ಕೊಟ್ಟಿಲ್ಲ, ಅವರಿಗೆ ಈ ಸಮಸ್ಯೆ ಅನ್ವಯಿಸುತ್ತದೆ. ಕೇಂದ್ರ ಸರ್ಕಾರ ಬೆಲೆಯನ್ನು ನಿಗದಿ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಒಂದು ಕೆಲಸ ಮಾಡಿದರೆ ಒಳ್ಳೆಯದು. ಏನೆಂದರೆ, ಕನಿಷ್ಠಪಕ್ಷ ಯಾವ ಯಾವ ಕಾರ್ಖಾನೆಯವರು ಹಣವನ್ನು ಕೊಟ್ಟಿಲ್ಲ ಅಥವಾ

ನಿಗದಿ ಮಾಡಿಲ್ಲ ಅವುಗಳ ಬಗ್ಗೆ ಸ್ಪೆಸಿಫಿಕ್ ಚಾರ್ಜ್ ಮಾಡಿದರೆ ಒಳ್ಳೆಯದು. ಆಗದೇಶದ ಜನರಿಗೂ ಗೊತ್ತಾಗುತ್ತದೆ. ಯಾವ ಯಾವ ಫ್ಯಾಕ್ಟರಿ ಓನರ್‌ಗಳು ಇವತ್ತಿನ ದಿವಸ ಹಣವನ್ನು ಕೊಡುತ್ತಿಲ್ಲ, ರೈತರಿಗೆ ಮೋಸ ಮಾಡುತ್ತಿದ್ದಾರೆ ಎನ್ನತಕ್ಕಂಥದ್ದು ಕೂಡ ಗೊತ್ತಾಗುತ್ತದೆ. ಅದಕ್ಕೆ ತಾವು ದಯವಿಟ್ಟು ಸ್ಪೆಸಿಫಿಕ್ ಆಗಿ ಚಾರ್ಜ್ ಮಾಡಿ. ಈಗ ಕೊಳ್ಳೇಗಾಲದಲ್ಲಿರುವ ಫ್ಯಾಕ್ಟರಿ ಇರಬಹುದು, ಮಂಡ್ಯದಲ್ಲಿರುವ ಫ್ಯಾಕ್ಟರಿ ಇರಬಹುದು, ನಿಮ್ಮ ಕಡೆ ಯಾವುದಾದರೂ ಹಣಕೊಟ್ಟಿಲ್ಲವೆಂದು ಸ್ಪೆಸಿಫಿಕ್ ಆಗಿ ಚಾರ್ಜ್ ಮಾಡಿದರೆ ಏನಾಗುತ್ತದೆಂದರೆ, ಅವರಿಗೂ ಕೂಡ ನಾಚಿಕೆಯಾಗುತ್ತದೆ. ಅಸೆಂಬ್ಲಿಯಲ್ಲಿ ರೈತರಿಗೆ ನಾವು ಕಬ್ಬಿನ ಬೆಲೆಯನ್ನು ನಿಗದಿ ಮಾಡಿಲ್ಲ ಅಥವಾ ನಿಗದಿ ಮಾಡಿದಂಥ ಹಣವನ್ನು ಕೊಟ್ಟಿಲ್ಲ, ಅದಕ್ಕಾಗಿ ನಮ್ಮನ್ನು ಹರಾಜು ಹಾಕುತ್ತಿದ್ದಾರೆಂಬ ಭಾವನೆ ಬರುತ್ತದೆ. ಆ ಕೆಲಸವಾದರೂ ಮಾಡಿ ಎಂದು ಹೇಳುತ್ತೇನೆ.

ಶ್ರೀ ಚಂದ್ರಕಾಂತ್ ಜಿ.ಬೆಲ್ಲದ್: ಅದರ ಜೊತೆಗೆ, ನಾವು ಏನು ಹೇಳಬೇಕಾಗಿದೆಯೆಂದರೆ, ಕೇಂದ್ರಸರ್ಕಾರದ ಬೆಲೆ ಮೇಲೆ ಇವತ್ತು ರಾಜ್ಯ ಸರ್ಕಾರವೂ ಸಹ ಬೆಲೆ ನಿಗದಿ ಮಾಡಿ, ಇವತ್ತು ರೈತರಿಗೆ ಕಬ್ಬಿಗೆ ಸರಿಯಾದ ಒಂದು ಬೆಲೆ ಕೊಡಬೇಕಾಗಿತ್ತು. ಆ ಕಾರ್ಯವನ್ನೂ ಸಹ ಇವತ್ತು ಮಾಡಲಿಲ್ಲ ಎಂದು ಹೇಳಿ, ಅನೇಕ ಜನ ರೈತರು ಕಬ್ಬು ಕೊಟ್ಟಂಥವರಿಗೆ ಇವತ್ತು ಹಣವನ್ನು ಮರು ಪಾವತಿ ಮಾಡಲಿಲ್ಲ. ಆ ಸಕ್ಕರೆ ಕಾರ್ಖಾನೆಗಳ ಬಗ್ಗೆ ನಾವು ಇವತ್ತು ಹೇಳುತ್ತಿದ್ದೇವೆ. 10 ಸಾವಿರ ಎಕರೆ ಕಬ್ಬು ಬೆಳೆದ ರೈತರು, ಕೇಸ್ ಮಾಡಿದ್ದಾರೆ, ಕೋರ್ಟ್‌ಗೆ ಹೋಗಿದ್ದಾರೆ. ಅಂತಹ ರೈತರ ಬಗ್ಗೆ ನಾವು ಹೇಳುತ್ತಿದ್ದೇವೆ. ಇವತ್ತು ನಾನು ಹೇಳುತ್ತಿರುವುದು, ಇದು ಹಣಕಾಸಿನ ಬೆಳೆ ನಮ್ಮ ರಾಜ್ಯದಲ್ಲಿ ಬಹುಸಂಖ್ಯಾತ ರೈತರು ಇವತ್ತು ಅನೇಕ ಪ್ರದೇಶಗಳಲ್ಲಿ ಕಬ್ಬು ಬೆಳೆದಿದ್ದಾರೆ. ಈ ಎರಡು ವರ್ಷಗಳಲ್ಲಿ ಎಷ್ಟು ದೊಡ್ಡ ಹಾನಿಯನ್ನನುಭವಿಸಿದ್ದಾರೆಂದೂ ಸಹ ಸನ್ಮಾನ್ಯ ನಮ್ಮ ಮಂತ್ರಿಗಳಿಗೆ ಗೊತ್ತಿದೆ. ಮಂತ್ರಿಗಳಿಗೆ ಈ ಪ್ರದೇಶದ ರೈತರ ಬಗ್ಗೆ ಮತ್ತು ಸಕ್ಕರೆ ಕಾರ್ಖಾನೆಗಳ ಬಗ್ಗೆ ಸಾಕಷ್ಟು ಗೊತ್ತಿದೆ-ಮತ್ತು ಇವತ್ತು ಕೇಂದ್ರಸರ್ಕಾರ ಏನೊಂದು ಬೆಲೆ ನಿಗದಿ ಮಾಡುತ್ತದೆ, ಅದಕ್ಕೆ ಪೂರಕವಾಗಿ ರೈತರಿಗೆ ಹಾನಿಯಾಗದಂತೆ ರಾಜ್ಯ ಸರ್ಕಾರವೂ ಸಹ ಬೆಲೆಯನ್ನು ಸರಿಯಾದ ವೇಳೆಯಲ್ಲಿ ನಿಗದಿ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಸಕ್ಕರೆ ಕಾರ್ಖಾನೆಗಳು ಅವರಿಗೆ ಪಾವತಿ ಮಾಡಲು ಅನುಕೂಲವಾಗುತ್ತದೆ. ಇವತ್ತು ನಾವು ಹೇಳುತ್ತಿರುವುದಿಷ್ಟೆ, ಕಬ್ಬು ಬೆಳೆದಂತಹ ರೈತ ಹೋಗಿ ಸಕ್ಕರೆ ಕಾರ್ಖಾನೆಗೆ ಕೊಟ್ಟಮೇಲೆ ಸರ್ಕಾರವೇ ಹೇಳುವಂತೆ, ಅವರು 14 ದಿನಗಳಲ್ಲಿ ಅವರಿಗೆ ಪೂರ್ಣ ಹಣವನ್ನು ಪಾವತಿ ಮಾಡಬೇಕಾಗುತ್ತದೆಂದು ಇದೆ. ಆದರೆ, ಇನ್ನೂವರೆಗೆ ಅನೇಕ ಸಕ್ಕರೆ ಕಾರ್ಖಾನೆಗಳು ಅವರ ಹಣವನ್ನು ಪಾವತಿ ಮಾಡಲಿಲ್ಲ. ಪಾವತಿ ಎಂದಿನಿಂದ ಅವರು ಮಾಡಬೇಕಾಗಿತ್ತು ಅದನ್ನು ಮಾಡಲಿಲ್ಲವೆಂದ ಮೇಲೆ ಅದರ ಮುಂದಿನ ಅವಧಿಗೆ ಇವತ್ತು ರಾಜ್ಯ ಸರ್ಕಾರ ಫಿಕ್ಸ್ ಮಾಡಿದಂತಹ ಬೆಲೆಗೆ ಅವರಿಗೆ ಬಡ್ಡಿಸಹಿತ ಹಣವನ್ನು ಇವರು ಪಾವತಿ ಮಾಡುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರ ಇವತ್ತು ಮಾಡಬೇಕಾಗುತ್ತದೆ. ಇಲ್ಲಾಂದರೆ, ರೈತ ಹಾನಿಯನ್ನು ಅನುಭವಿಸಬೇಕಾಗುತ್ತದೆ.

ಇವತ್ತು ಮಾನ್ಯ ಮಂತ್ರಿಗಳು ಕೇಂದ್ರಸರ್ಕಾರ ಅನುಸರಿಸುತ್ತಿರುವಂತಹ ನೀತಿಯಿಂದ ಈಗಾಗಲೇ ನಮ್ಮ ಸಕ್ಕರೆ ಕಾರ್ಖಾನೆಗಳಲ್ಲಿ ಸಾಕಷ್ಟು ಸಕ್ಕರೆ ಸ್ಟಾಕ್ ಇದೆ. ಅದನ್ನು ಕೇಂದ್ರಸರ್ಕಾರ ಬಿಡುಗಡೆ ಮಾಡುತ್ತಿಲ್ಲ ಮತ್ತು ಅವರಿಗೆ ಹಣವನ್ನು ಪಾವತಿ ಮಾಡಿದ ಮೇಲೆ ರೈತರಿಗೆ ಸಹಾಯ ಮಾಡಲಿಕ್ಕೆ ಅನುಕೂಲ ಮಾಡುತ್ತಿಲ್ಲ. ಕೇಂದ್ರಸರ್ಕಾರ ಇಂತಹ ವೇಳೆಯಲ್ಲಿ ಮತ್ತು ಆಮದನ್ನು ಮಾಡುತ್ತಿದೆಯೆಲ್ಲಾ, ನೀತಿಯನ್ನು ಖಂಡಿಸಬೇಕಾಗುತ್ತದೆ. ಕೇಂದ್ರದ ಈ ನೀತಿಗೆ ಸಹ ನಮ್ಮ ಸರ್ಕಾರ ಇವತ್ತು ಸರಿಯಾದಂತಹ ಕಾರ್ಯಕ್ರಮ ತೆಗೆದುಕೊಂಡು, ಕಬ್ಬು ಬೆಳೆಯುವಂತಹ ರೈತರಿಗೆ ಸಹಾಯ ಮಾಡುವಂತಹ ಕಾರ್ಯಕ್ರಮಗಳನ್ನೇನು ಹಮ್ಮಿಕೊಂಡಿದ್ದಾರೆ ಅದನ್ನು ತಿಳಿಸಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ವಿನಂತಿಸಿಕೊಳ್ಳುತ್ತಾ, ನನಗೆ ಇಷ್ಟು ಮಾತನಾಡಲು ಅವಕಾಶಕೊಟ್ಟ ತಮಗೆ ವಂದಿಸುತ್ತೇನೆ.

ಶ್ರೀ ಪ್ರಕಾಶ್, ಬಿ.ಹುಕ್ಕೇರಿ:- ಮಾನ್ಯ ಸಭಾಧ್ಯಕ್ಷರೆ, ಶ್ರೀ ಪುಟ್ಟಣ್ಣಯ್ಯನವರು ದೂದ್‌ಗಂಗಾ ಸಕ್ಕರೆ ಕಾರ್ಖಾನೆಯವರು ರೈತರಿಗೆ 101 ಕೋಟಿ 10 ಲಕ್ಷ ರೂಪಾಯಿಗಳ ಬಿಲ್ ಕೊಡಬೇಕೆಂದು ಹೇಳಿದ್ದಾರೆ. ಈಗಾಗಲೇ ನಾವು ದೂದ್‌ಗಂಗಾ ಕೃಷ್ಣಾ ಸಕ್ಕರೆ ಕಾರ್ಖಾನೆಯವರಿಗೆ 1996-97ನೇ ಸಾಲಿಗೆ 600 ರೂಪಾಯಿಗಳ ಮೊದಲನೆ ಕಂತನ್ನು ಕೊಟ್ಟಿದ್ದು, ಎರಡನೆ ಕಂತಾಗಿ 110 ರೂಪಾಯಿಗಳನ್ನು ಕೊಟ್ಟಿದ್ದೇವೆ. ಅಂದರೆ 710 ರೂಪಾಯಿಗಳನ್ನು ರೈತರಿಗೆ ಮುಟ್ಟಿಸುವಂತಹ ವ್ಯವಸ್ಥೆಯನ್ನು ಈಗಾಗಲೇ ಮಾಡಿದ್ದೇವೆ. ಇದಲ್ಲದೆ, ಮತ್ತೊಂದು ವಿಷಯವೇನೆಂದರೆ, ರೈತರು ಕಬ್ಬನ್ನು ಬೆಳೆಯುತ್ತಾರೆ, ಆ ಕಬ್ಬಿನ ಸಾಗಾಣಿಕೆ ಮತ್ತು ಕಟಾವನ್ನು ನಮ್ಮ ಕಾರ್ಖಾನೆ ಮುಖಾಂತರ ಮಾಡಿಕೊಂಡು ನಾವು ಹೋಗಬೇಕಾಗುತ್ತದೆ. ಆ ದೃಷ್ಟಿಯಿಂದ ಪ್ರತಿ ಟನ್‌ಗೆ ಸುಮಾರು 140 ರೂಪಾಯಿಗಳು ಖರ್ಚು ಬರುತ್ತದೆ. ಕಟಾವು ಮತ್ತು ಸಾಗಾಣಿಕೆಗೆ ಅಷ್ಟಾಗುತ್ತದೆ. ಅಂದರೆ, ಎಲ್ಲ ಸೇರಿ ನಾವು 850 ರೂಪಾಯಿಗಳ ತನಕ ಬರುತ್ತದೆ. 1996-97ನೇ ಸಾಲಿನಲ್ಲಿ ದೂದ್‌ಗಂಗಾ ಕೃಷ್ಣಾ ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಬಿಲ್ ಕೊಡುವಂತಹ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಈಗಾಗಲೇ ಸಂಕೇಶ್ವರ ಸಕ್ಕರೆ ಕಾರ್ಖಾನೆಯವರು ಮೊದಲನೇ ಬಿಲ್ಲು 600 ರೂಪಾಯಿಗಳನ್ನು ಕೊಟ್ಟಿದ್ದಾರೆ. ಎರಡನೆ ಕಂತಾಗಿ 800 ರೂಪಾಯಿಗಳನ್ನು ಕೊಟ್ಟಿದ್ದಾರೆ. ಕಬ್ಬನ್ನು ತರುವಂತಹ ವ್ಯವಸ್ಥೆ ಕೂಡ ಇದೆ. 940 ರೂಪಾಯಿಗಳ ತನಕ ರೈತರಿಗೆ ಮುಟ್ಟಿಸುವಂತಹ ವ್ಯವಸ್ಥೆ ಮಾಡಿದಾಗ, ಅದಕ್ಕಿಂತ ಹೆಚ್ಚಾಗಿ ನಾವು ರೈತರಿಗೆ ಏನು ಮಾಡುವುದಕ್ಕೆ ಸಾಧ್ಯ ಹೇಳಿ? ಅದೇ ತರಹ, ಮಲಪ್ರಭಾ, ನಿಪ್ಪಾಣಿ ಸಕ್ಕರೆ ಕಾರ್ಖಾನೆಯವರು ಕೂಡ ಮಾಡಿದ್ದಾರೆ. ಆ ದೃಷ್ಟಿಯಿಂದ ಹೇಳುತ್ತಿರುವುದು, ಉತ್ತರ ಕರ್ನಾಟಕ ಸಕ್ಕರೆ ಕಾರ್ಖಾನೆ, ಮಹಾರಾಷ್ಟ್ರ ಸಂಬಂಧವಿಟ್ಟುಕೊಂಡ ಸಕ್ಕರೆ ಕಾರ್ಖಾನೆಗಳು ಹೆಚ್ಚಾಗಿ ಯಾವುವೂ ಸಹಕಾರ ಸಂಘ ನಷ್ಟದಲ್ಲಿಲ್ಲ ಅಥವಾ ರೈತರಿಗೆ ದರವನ್ನು ಕೊಡುವಂತಹ ವ್ಯವಸ್ಥೆ ಮಾಡಿಲ್ಲ, ಒಳ್ಳೆಯ ದರವನ್ನು ರೈತರಿಗೆ ಕೊಡುತ್ತಿದ್ದೇವೆ. ಸರಿಯಾಗಿ ಕಬ್ಬನ್ನು ತರುವಂತಹ ವ್ಯವಸ್ಥೆ ಮಾಡುತ್ತಿದ್ದೇವೆ. ಶ್ರೀ ಪುಟ್ಟಣ್ಣಯ್ಯನವರಿಗೆ ನಾನು ದಯವಿಟ್ಟು ವಿನಂತಿ ಮಾಡುತ್ತೇನೆ, ಏನಿದ್ದರೂ ಅವರ

ಭಾಗದಲ್ಲಿ ಅಂತಹ ಕಾರ್ಖಾನೆಗಳು ಇವೆ. ಆದರೆ, ನಮ್ಮ ಭಾಗದಲ್ಲಿ ಆ ರೀತಿಯ ವ್ಯವಸ್ಥೆ ಇಲ್ಲ. ಆದ್ದರಿಂದ, ದಯವಿಟ್ಟು ಶ್ರೀ ಪುಟ್ಟಣ್ಣಯ್ಯನವರ ಏರಿಯಾದಲ್ಲಿ ಸಹಕಾರ ಸಂಘಗಳು ಇವೆ, ಅವುಗಳ ಸಲುವಾಗಿ ಮಾತನಾಡಬೇಕೇ ಹೊರತಾಗಿ ನಮ್ಮ ಕಡೆ, ನಮ್ಮ ಭಾಗದ ಸಲುವಾಗಿ ಮಾತನಾಡಬಾರದೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಮಾನ್ಯ ಸಭಾಧ್ಯಕ್ಷರೆ, ನನ್ನ ಹೆಸರು ಹೇಳಿ ಮಾತನಾಡಿದ್ದರಿಂದ, ನಾನು ಹೇಳಬೇಕಾಗಿದೆ. ಇವತ್ತು ಕೃಷಿ ಇಲಾಖೆಗಳಿವೆ, ಒಂದು ಎಕರೆ ಕಬ್ಬು ಬೆಳೆಯಬೇಕಾದರೆ ಎಷ್ಟು ಖರ್ಚಾಗುತ್ತದೆಂದು ವೈಜ್ಞಾನಿಕ ಬೆಲೆಯ ನೀತಿಯಾಧಾರದ ಮೇಲೆ ಯಾವುದೇ ಕಾರ್ಖಾನೆಗಳೂ ಕೊಡುತ್ತಿಲ್ಲ. ಆಯಾಯ ಕಾರ್ಖಾನೆಯ ಪ್ರದೇಶದ ರೈತರಿಗೆ ರಿಕವರಿ ಆಧಾರದ ಮೇಲೆ ಕೊಡುತ್ತೇವೆ. ಕೆಲವರದು ಡಿಸ್ಟಿಲರಿ, ಕೆಲವರದು ನಾನ್-ಡಿಸ್ಟಿಲರಿ. ಆದ್ದರಿಂದ ಕಬ್ಬನ್ನು ರೆಕವರಿ ಆಧಾರದ ಮೇಲೆ ಕೊಡುತ್ತಿದ್ದಾರೆಯೇ ಹೊರತು ಬೇರೆ ಇಲ್ಲ. ವೈಜ್ಞಾನಿಕ ಬೆಲೆ ನೀತಿಯನ್ನು ಯಾವುದೇ ಕೇಂದ್ರಸರ್ಕಾರ ಆಗಬಹುದು ರಾಜ್ಯಸರ್ಕಾರ ಆಗಬಹುದು, ನಾನು ಹೇಳುತ್ತಿರುವುದು ನಾವು ಕೊಟ್ಟಿರುವ ಲೆಕ್ಕ ಬೇಡಿ. ಕೃಷಿ ಇಲಾಖೆಯ ಅಂಶದ ಆಧಾರದಮೇಲೆ ವೈಜ್ಞಾನಿಕ ಬೆಲೆ ನೀತಿಯನ್ನು ನಿಗದಿ ಮಾಡತಕ್ಕಂಥ ವಿಚಾರದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರಗಳು ಸೋತಿವೆ ಎನ್ನತಕ್ಕಂಥ ಒಂದು ವಿಚಾರ ಬಿಟ್ಟರೆ ನೀವು ರೆಕವರಿ ಆಧಾರದ ಮೇಲೆ ಕೆಲವು ಸಹಕಾರಿ ಸಕ್ಕರೆ ಕಾರ್ಖಾನೆಗಳು ಉತ್ತಮವಾದ ಆಡಳಿತ ನಡೆಸಿ ಬೆಲೆ ಕೊಡುತ್ತಿದ್ದೀರಿ. ಅದು ಬೇರೆ ಪ್ರಶ್ನೆ. ನಾವು ಒಟ್ಟಾರೆ ಇಡೀ ರಾಜ್ಯದ ಬಗ್ಗೆ ಮಾತನಾಡುವಾಗ ನಾರ್ತ್‌ಕರ್ನಾಟಕದ ಸುದ್ದಿ ಮಾತನಾಡಬೇಡಿ ಈ ಕಡೆ ಸುದ್ದಿ ಮಾತನಾಡಿ ಎಂದು ಹೇಳುವುದಕ್ಕೆ ಅವರಿಗೆ ಹಕ್ಕಿಲ್ಲ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ:- ಮಾತನಾಡಬೇಡಿ ಎಂದು ಹೇಳಲಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ತಾವು ಹೇಳಿದ್ದು ಅದೇರೀತಿ. ನಾನು ಇಡೀ ರಾಜ್ಯದ ಕಬ್ಬು ಬೆಳೆಗಾರರ ಪರವಾಗಿ ಮಾತನಾಡುತ್ತೇನೆ. ಆ ಭಾಗದ್ದು ಮಾತನಾಡಬೇಡಿ ಈ ಭಾಗದ್ದು ಮಾತನಾಡಿ ಎನ್ನುವ ಪ್ರಶ್ನೆ ಎಲ್ಲಿ ಬಂತು.

ಶ್ರೀ ಡಿ.ಬಿ.ಇನಾಂದಾರ್:- ಮಾನ್ಯ ಅಧ್ಯಕ್ಷರೆ, ಭ್ರಷ್ಟಾಚಾರದ ಕೆಲವು ವಿಷಯಗಳನ್ನು ಮಾತನಾಡಿದಾಗ ಸ್ಪಷ್ಟವಾಗಿ ಭ್ರಷ್ಟಚಾರದ ಬಗ್ಗೆ ಮಾತನಾಡಬೇಕು. ಆದರೆ ಪುಟ್ಟಣ್ಣಯ್ಯನವರು ಕೆಲವೊಂದು ವಿಷಯಗಳನ್ನು ಹೇಳಿದರು. ಸೈಂಟಿಫಿಕ್ಕಾಗಿ ಬೆಲೆ ಕೊಡಬೇಕಾಗಿತ್ತು, ಅದನ್ನು ಕೊಡಲಿಲ್ಲ. ಯೋಗ್ಯರೀತಿಯಿಂದ ರಾಜ್ಯ ಸರ್ಕಾರ ಆಗಲೀ ಮುಖ್ಯವಾಗಿ ಕೇಂದ್ರಸರ್ಕಾರ ನಿಗದಿಪಡಿಸಿದಂಥ ಬೆಲೆ ಕಡಿಮೆ ಎಂದು. ಆದರೆ ಭ್ರಷ್ಟಾಚಾರದ ವಿಷಯ ಬಂದಾಗ ದಯವಿಟ್ಟು ತಾವು ಸ್ಪೆಸಿಫಿಕ್ಕಾಗಿ ಆ ಫ್ಯಾಕ್ಟರಿ ಬಗ್ಗೆ ಮಾತ್ರ ಹೇಳಬೇಕು. ಜನರಲೈಸ್ ಮಾಡಿದರೆ ಎಲ್ಲರೂ ಬರುತ್ತಾರೆ ಎಂಬ ಆರೋಪ ಬರಬಾರದು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಇನ್‌ಎಫಿಷಿಯೆನ್ಸಿ ಬಗ್ಗೆ ನಾನು ಹೇಳುತ್ತಿದ್ದೇನೆ. ಆಡಳಿತ ಲೋಪದೋಷದ ಬಗ್ಗೆ ಮಾತನಾಡಿದೆ. ಎಲ್ಲ ಕಾರ್ಖಾನೆ ಎಂದು ಹೇಳಲಿಲ್ಲ.

ಶ್ರೀ ಎಸ್.ಶಿವಶಂಕರಪ್ಪ:- ಮಾನ್ಯ ಅಧ್ಯಕ್ಷರೆ, ಈಗಾಗಲೇ ರೈತರ ಬಗ್ಗೆ ಎಲ್ಲಾ ಪಕ್ಷದವರಿಗೂ ಕಾಳಜಿ ತುಂಬಾ ಜಾಸ್ತಿ ಇದೆ. ನಾವು ಒಂದೇ ಕಡೆ ರೈತರ ಬಗ್ಗೆ ಯೋಚನೆ ಮಾಡಿದರೆ ಕನ್‌ಸ್ಯೂಮರ್ ಕಡೆಯೂ ನಾವು ಹೋಗಬೇಕಾಗುತ್ತದೆ. ಸಾಧಾರಣ ಮನುಷ್ಯ ಜೀವನ ಮಾಡಬೇಕಾದರೆ ಅವರಿಗೂ ಕೂಡ ಎಟುಕದ ರೀತಿಯಲ್ಲಿ ಸಕ್ಕರೆ ಧಾರಣೆ ಹೋದರೆ ಅದನ್ನು ಕಡಿಮೆ ಮಾಡುವುದಕ್ಕೆ ಸರ್ಕಾರದವರು ಹೊರದೇಶಗಳಿಂದ ಇಂಪೋರ್ಟ್ ಮಾಡತಕ್ಕಂಥ ಒಂದು ಪದ್ಧತಿಯನ್ನು ಮಾಡಿದ್ದಾರೆ. ಅದು ಬೀಟ್‌ಷುಗರ್ ಎಂದು ನನ್ನ ಕೆಲವು ಸ್ನೇಹಿತರು ಹೇಳಿದರು. ಷುಗರ್‌ಕೇನ್ ಸಕ್ಕರೆಯೂ ಬರುತ್ತದೆ. ಇವತ್ತಿನ ದಿವಸ ಕರ್ನಾಟಕದಲ್ಲಿ 1,300 ರೂಪಾಯಿ 1,325 ರೂಪಾಯಿ ಇದ್ದ ರೇಟ್ ಇವತ್ತು 1,500 ರೂಪಾಯಿ ಸಕ್ಕರೆಗೆ ರೇಟ್ ಆಗಿದೆ. ಆದ್ದರಿಂದ ಸರ್ಕಾರದವರು, ಕೇಂದ್ರಸರ್ಕಾರದವರು ಓ.ಜಿ.ಎಲ್.ನಲ್ಲಿ ಯಾವುದೇ ಸೆಸ್‌ಅಥವಾ ಡ್ಯೂಟಿ ಇಲ್ಲದೆ, ಎಕ್ಸೈಜ್ ಡ್ಯೂಟಿ ಇಲ್ಲದ ರೀತಿಯಲ್ಲಿ ಇಂಪೋರ್ಟ್ ಮಾಡಬಹುದು ಎಂದು ಸರ್ಕಾರ ನಿಗದಿ ಮಾಡಿದೆ. ಅದನ್ನು ತರಿಸಿದಾಗ ಇವತ್ತಿನ ದಿವಸ ಇಂಡಿಯಾ ದೇಶದಲ್ಲಿ ರೇಟ್ ಕಡಿಮೆ ಮಾಡಬಹುದು ಎಂದು ಮಾಡಿದ್ದಾರೆ. ಅದನ್ನು ತರಿಸಿದಾಗ 100-150 ರೂಪಾಯಿ ರೇಟ್ ಕಡಿಮೆ ಬೀಳುತ್ತದೆ. ಈಗಾಗಲೇ ಕರ್ನಾಟಕದಲ್ಲಿ 30 ಸಕ್ಕರೆ ಕಾರ್ಖಾನೆಗಳಿಗೆ ಲೆಸೆನ್ಸ್‌ನ್ನು ಕೇಂದ್ರಸರ್ಕಾರದವರು ಕೊಟ್ಟಿದ್ದಾರೆ. ಇವತ್ತು ಯಾವ ಬ್ಯಾಂಕಿನವರೂ ಕೂಡ ಸಕ್ಕರೆ ಕಾರ್ಖಾನೆಗಳವರಿಗೆ ಲೋನ್‌ಗಳನ್ನು ಕೊಡುವುದಕ್ಕೆ ತಯಾರಿಲ್ಲ. ಏಕೆಂದರೆ, ಈಗಾಗಲೇ ಇವರು ಹೇಳಿದಂತೆ ಅನೇಕ ಜನ ಸಕ್ಕರೆ ಕಾರ್ಖಾನೆ ಮಾಲೀಕರು ಬ್ಯಾಂಕಿನಲ್ಲಿ ತೆಗೆದುಕೊಂಡಿರುವಂಥ ಸಾಲದ ಹಣವನ್ನು ಮರುಪಾವತಿ ಸರಿಯಾಗಿ ಮಾಡಿಲ್ಲ. ಒಂದು ಕಡೆ ಬ್ಯಾಂಕ್ ಸಾಲ ಕೊಟ್ಟಿಲ್ಲ. ಇನೊಂದು ಕಡೆಗೆ ರೈತರಿಗೆ ಕೊಡಬೇಕಾದಂಥ ಹಣ ಕೊಡದೇ ಬಾಕಿ ಉಳಿಸಿಕೊಂಡಿರುವಂಥ ಫ್ಯಾಕ್ಟರಿಗಳಿವೆ. ರೈತರಿಗೆ ಏನೂ ಕೊಡದ ರೀತಿಯಲ್ಲಿ ಪೂರ್ಣ ಬೆಲೆಯನ್ನು ಕೊಡಿಸತಕ್ಕಂಥ ಫ್ಯಾಕ್ಟರಿಗಳಿವೆ. ಇದೇನಾಗುತ್ತದೆಂದರೆ ಕೇಂದ್ರಸರ್ಕಾರದವರು ನಿಗದಿ ಮಾಡಿದ ಬೆಲೆಯ ಮೇಲೆ ನಮ್ಮ ಕರ್ನಾಟಕ ಸರ್ಕಾರದವರು ಬೆಲೆಯನ್ನು ನಿಗದಿ ಮಾಡಿ ಕೊಡತಕ್ಕಂಥ ಒಂದು ಪದ್ಧತಿಯನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ, ಆ ಏರಿಯಾದ ಮೇಲೆ, ಸಕ್ಕರೆ ಕಾರ್ಖಾನೆಗಳು ಎಲ್ಲಿವೆಯೊ ಅಲ್ಲಿ ಏನು ಅವರೇಜ್ ಈಲ್ಡ್ ಬರುತ್ತದೋ ಅದರ ಮೇಲೆ ಬೆಲೆ ನಿಗದಿಯನ್ನು ಮಾಡಿ ರೈತರಿಗೆ ಸರಿಯಾದ ಬೆಲೆ ದೊರಕುವಂತೆ ಮಾಡಬೇಕು. ಮತ್ತೆ ಮುಂದೆ ಇನ್ನೊಂದು ಸಂದರ್ಭದಲ್ಲಿ ಧಾರಣೆಯೂ ಹೆಚ್ಚು ಹೋಗದಂತೆ ನೋಡಿಕೊಳ್ಳಬೇಕಾದ್ದು ಸರ್ಕಾರದ ಕರ್ತವ್ಯವಾಗಿದೆ. ಈ ದಿಕ್ಕಿನಲ್ಲಿ ಸರ್ಕಾರ ಬೆಲೆಯನ್ನು ನಿಗದಿ ಮಾಡಬೇಕಾದರೆ, ಈಗಾಗಲೇ ಹೇಳುತ್ತಿದ್ದರು 27ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳು ಸಕ್ಕರೆ ಕಾರ್ಖಾನೆ ಮಾಲೀಕರು ಮತ್ತು ಕಬ್ಬು ಬೆಳೆಗಾರರ ಮೀಟಿಂಗನ್ನು ಕರೆದಿದ್ದಾರೆ ಎಂದು. ಕರೆದಾಗ ಯೋಗ್ಯ ರೀತಿಯಲ್ಲಿ

ಆವತ್ತು ಚರ್ಚೆ ಮಾಡಿ ಬೆಲೆ ನಿಗದಿ ಮಾಡೋಣ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಎಲ್ಲಾ ಸಕ್ಕರೆ ಕಾರ್ಖಾನೆಗಳೂ ಕೆಟ್ಟುಹೋಗಿವೆ ಎಂದು ಹೇಳುವುದು ಬೇಡ. ಇಂಥದ್ದು ಎಂದು ಬೊಟ್ಟು ಮಾಡಿ ಹೇಳಬೇಕೇ ವಿನಾ ಎಲ್ಲರಿಗೂ ಒಂದೇ ಯಾರ್ಡ್‌ಸ್ಟಿಕ್ ಅನುಸರಿಸುವುದು ಬೇಡ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನು ನಾವೆಲ್ಲಾ ಹೊಸ ಸಕ್ಕರೆ ಕಾರ್ಖಾನೆ ಮಾಡತಕ್ಕವರಿದ್ದೇವೆ. ಇನ್ನು ನಮ್ಮ ಗತಿ ಏನಾಗುತ್ತದೋ ಮುಂದೆ ಗೊತ್ತಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ನಾವು ಹಾಗೆ ಹೇಳಲೇ ಇಲ್ಲ. ಏತಕ್ಕೆ ಇವರು ಹೀಗೆ ಹೇಳುತ್ತಾರೋ ಗೊತ್ತಿಲ್ಲ.

ಶ್ರೀ ಎಸ್.ಶಿವಶಂಕರಪ್ಪ:- ಅವರುಯೋಚನೆ ಮಾಡುವುದು ಬೇಡ. ನಾವು ಸಕ್ಸಸ್‌ಫುಲ್ ಇಂಡಸ್ಟ್ರಿಯಲಿಸ್ಟ್. ನಮಗೆ ಲಾಭ ಹೇಗೆ ಮಾಡಬೇಕು ಎಂಬುದು ಗೊತ್ತಿದೆ. ನಮ್ಮ ಫ್ಯಾಕ್ಟರಿಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ಚೆನ್ನಾಗಿ ಲಾಭ ಮಾಡುತ್ತವೆ. ನೀವೇನೂ ಯೋಚನೆ ಮಾಡಬೇಡಿ.

ಅಧ್ಯಕ್ಷರು:- ನೀವೆಲ್ಲಾ ಲಾಭ ಮಾಡಿದರೇನೆ ಅವರಿಗೆ ಪ್ರಯೋಜನವಾಗುವುದು.

ಶ್ರೀ ಎಸ್.ಶಿವಶಂಕರಪ್ಪ:- ಅವರಿಗೂ ಆಗುತ್ತದೆ ಸಾರ್.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ:- ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ನಿಗದಿ ಮಾಡಿದ್ದಕ್ಕಿಂತ ಹೆಚ್ಚಿಗೆ ರೇಟನ್ನು ನಾವು ಕೊಡುತ್ತಿದ್ದೇವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಯಾವ ಆಧಾರದ ಮೇಲೆ ಆ ಬೆಲೆ ಕೊಡುತ್ತೀರಿ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಯಾವ ಆಧಾರದ ಮೇಲೆ ಆ ಬೆಲೆ ಕೊಡುತ್ತಿದ್ದೀರಿ. ಎಂಬುದನ್ನು ಹೇಳಿ.

(ಹಲವಾರು ಸದಸ್ಯರು ಒಟ್ಟಿಗೆ ಮಾತನಾಡತೊಡಗಿದರು, ಗೊಂದಲವಾಯಿತು.)

ಅಧ್ಯಕ್ಷರು:- ಒಂದು ನಿಮಿಷ ಕುಳಿತುಕೊಳ್ಳಿ ರೆಡ್ಡಿಯವರೆ. ನಾನು ಏನು ಹೇಳುತ್ತೇನೆಂದರೆ ನೀವು ಮಾರ್ಕ್ಸಿಸ್ಟ್. ಮಾನ್ಯ ಪುಟ್ಟಣ್ಣಯ್ಯನವರು ವೈಜ್ಞಾನಿಕವಾದ ಆಧಾರ ಇಲ್ಲ ಎಂದು ಹೇಳಿದರು. ಈ ದೇಶದಲ್ಲಿ ಕಬ್ಬಿಗೆ ಎಂದು ಅಲ್ಲ, ಯಾವುದಕ್ಕೂ ಕೂಡ ಮಾನವಶಕ್ತಿಯನ್ನು ಎಷ್ಟು ಬಳಸುತ್ತಿದ್ದೇವೆ ಆ ಮಾನವ ಶಕ್ತಿಗೆ ಏನು ಬೆಲೆ ನಿಗದಿ ಮಾಡಿದ್ದೇವೆ ಎಷ್ಟು ಗಂಟೆ ಅದರ ಬಳಕೆಯಾದರೆ ಅದಕ್ಕೆ ಎಷ್ಟು ಪ್ರತಿಫಲ ಕೊಡಬೇಕು, ಯಾರುಯಾರ ದುಡಿತಕ್ಕೆ ಎಷ್ಟೆಷ್ಟು ಫಲ ಸಿಗುತ್ತಾ ಇದೆ ಎನ್ನತಕ್ಕಂಥ ವ್ಯವಸ್ಥೆಯನ್ನು ಈ ದೇಶದಲ್ಲಿ ರೂಪಿಸಿಲ್ಲ. ಊಟ ಮಾಡುವುದಕ್ಕೋಸ್ಕರ ಸಂಪಾದನೆ ಮಾಡುವುದಕ್ಕೆ ಬೆವರು ಸುರಿಸುವವರು ಒಂದು ವರ್ಗ ಇದ್ದರೆ, ಹೊಟ್ಟೆ ಬೆಳೆಸುವುದಕ್ಕೆ ಊಟ

ಮಾಡುವುದಕ್ಕಾಗದೇ ಬೆವರು ಸುರಿಸುವವರು ಒಂದು ವರ್ಗ ಇದ್ದಾರೆ. ಆದ್ದರಿಂದ ಇದನ್ನು ಇನ್ನೊಂದು ದಿವಸ ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳೋಣ. ಈಗ ರವೀಂದ್ರನಾಥ್ ಅವರೇ ನೀವು ಎರಡು ನಿಮಿಷ ಮಾತನಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನನ್ನ ರಿಕ್ವೆಸ್ಟ್ ಏನೆಂದರೆ ಪುಟ್ಟಣ್ಣಯ್ಯನವರಾಗಲೀ ಶ್ರೀರಾಮರೆಡ್ಡಿಯವರಾಗಲೀ,

ಅಧ್ಯಕ್ಷರು:- ಅವರಿಬ್ಬರು ಹೇಳಿದ್ದೂ ನಿಜಾನೆ. ಪುಟ್ಟಣ್ಣಯ್ಯನವರು ಹೇಳಿದ್ದೂ ನಿಜ, ಪ್ರಕಾಶ್ ಹುಕ್ಕೇರಿ ಅವರು ಹೇಳಿದ್ದೂ ನಿಜ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇಲ್ಲ,ಇಲ್ಲ. ಅವರು ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕ ಸಕ್ಕರೆ ಕಾರ್ಖಾನೆಗಳ ಬಗ್ಗೆ ಮಾತನಾಡುತ್ತಿದ್ದಾರೆ. ಕೆಲವು ಸಕ್ಕರೆ ಕಾರ್ಖಾನೆ ಮಾಲೀಕರು ರೈತರಿಗೆ ಕೊಡತಕ್ಕಂಥ ಹಣವನ್ನು ಕೊಡುತ್ತಿಲ್ಲ. ಪಾವತಿ ಮಾಡುತ್ತಾ ಇಲ್ಲ. ಅವರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಸ್ವಾಭಾವಿಕವಾಗಿ ಬೆಳಗಾಂ, ಧಾರವಾಡ, ಬಿಜಾಪುರದಲ್ಲಿ ಕೋ-ಅಪರೇಟೀವ್ ಮೂವ್‌ಮೆಂಟ್ ಬಹಳ ಸ್ಟ್ರಾಂಗ್ ಇದೆ. ಅಲ್ಲಿ ಬಹಳ ಚೆನ್ನಾಗಿ ನಡೆದಿದೆ. ಈಗ ಯಾರೂ ಕೂಡ ಸಂಕೇಶ್ವರ್, ನಿಪ್ಪಾಣಿ, ದೂದ್‌ಗಂಗಾ ಇವುಗಳ ಬಗ್ಗೆ ಹೇಳುವುದಿಲ್ಲ. ಏಕೆಂದರೆ ಅವು ಯಶಸ್ವಿಯಾಗಿ ನಡೆದಿವೆ. ಆದರೆ ಕೊಳ್ಳೇಗಾಲದಲ್ಲಿ ನಡೆದಂಥದ್ದು ಹೇಳಬೇಕಲ್ಲ. ಅಥವಾ ಪುಟ್ಟಣ್ಣಯ್ಯನವರ ಜಿಲ್ಲೆ ಮಂಡ್ಯದಲ್ಲಿ ನಡೆದಿದ್ದು ಹೇಳಬೇಕಲ್ಲ.

ಅಧ್ಯಕ್ಷರು:- ನಾವು ಪ್ರಶಂಸೆ ಮಾಡುತ್ತೇವೆ ವಿರೋಧಪಕ್ಷದ ನಾಯಕರಿಗೆ. ತಾವು ಬುದ್ಧಿವಂತಿಕೆಯಿಂದ ತಾವು ಹೇಳಬೇಕಾದುದನ್ನೆಲ್ಲಾ ಹೇಳಿದ್ದೀರಿ. ನಿಮಗೆ ಅಭಿನಂದನೆಗಳು. ಆ ಕಾರಣದಿಂದಲೇ ತಾವು ಈ ಸಭೆಯಲ್ಲಿ ಶಾಶ್ವತವಾಗಿ ಸದಸ್ಯರಾಗಿ ಉಳಿದಿದ್ದೀರಿ. ನಿಮ್ಮ ವಿದ್ವತ್ತನ್ನು ನಾವು ಮೆಚ್ಚಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಕೆಲವು ಸರ್ಕಾರದ ಬೆಂಬಲ ಇರತಕ್ಕ ಕಾರ್ಖಾನೆಗಳು ರೈತರಿಗೆ ಪಾವತಿ ಮಾಡಬೇಕಾದುದನ್ನು ಪಾವತಿ ಮಾಡುತ್ತಿಲ್ಲ. ಅದನ್ನು ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು:- ರವೀಂದ್ರನಾಥ್ ಅವರು ಏನು ಹೇಳುತ್ತಾರೋ ಕೇಳೋಣ ಪಾಪ, ಅಪರೂಪಕ್ಕೆ ಅವಕಾಶ ಕೇಳಿದ್ದಾರೆ.

ಶ್ರೀ ರವೀಂದ್ರನಾಥ್.ಎಸ್.ಎ:- ಸನ್ಮಾನ್ಯ ಅಧ್ಯಕ್ಷರೆ, ಈಗ ರಾಜ್ಯಸರ್ಕಾರ ಮತ್ತು ಕೇಂದ್ರ ಸರ್ಕಾರ ಒಂದೇ ಇರುವುದರಿಂದ ಲೆವಿ ನೀತಿ ಬಹಳ ತಪ್ಪಿದೆ. ಈ ಲೆವಿ ನೀತಿಯನ್ನು ಸರಿ ಮಾಡತಕ್ಕದ್ದು ಮುಖ್ಯ. ಅಕ್ಕಿ ಇರಬಹುದು, ಗೋಧಿ ಇರಬಹುದು ಮಿಲ್ ಪಾಯಿಂಟ್‌ನಿಂದ ಸರ್ಕಾರ ತೆಗೆದುಕೊಳ್ಳುತ್ತಿದೆ. ತೆಗೆದುಕೊಂಡಿದ್ದಕ್ಕೆ ಹಣ

ಕೇಂದ್ರ ಸರ್ಕಾರದವರು ಕೊಡುತ್ತಾರೆ. ಅದೇರೀತಿ ಸಕ್ಕರೆಗೂ ಕೂಡ 40 ಪರ್ಸೆಂಟ್ 50 ಪರ್ಸೆಂಟ್ ಲೆವಿ ಸಕ್ಕರೆಯನ್ನು ಅವರು ತೆಗೆದುಕೊಂಡು ಅವರ ಹತ್ತಿರ ಕಸ್ಟಡಿಯಲ್ಲಿಟ್ಟುಕೊಂಡರೆ ಕಬ್ಬು ಬೆಳೆಯುವವರಿಗೆ ಒಂದು ಟನ್‌ಗೆ 100 ರೂಪಾಯಿ ಜಾಸ್ತಿ ಕೊಡಬಹುದು. ಆ ಒಂದು ವ್ಯವಸ್ಥೆಯನ್ನು ಇವತ್ತು ನಮ್ಮ ಸಕ್ಕರೆ ಮಂತ್ರಿಗಳು ಮಾಡಿದರೆ ಒಳ್ಳೆಯದು. ಬೆಳಗಾರರಿಗೆ 100 ರೂಪಾಯಿ 1 ಟನ್‌ಗೆ ಕೊಡತಕ್ಕಂಥ ಅವಶ್ಯಕತೆ ಇದೆ. ಅದನ್ನು ಮಾಡಿಸಬಹುದು ಈ ಸಂದರ್ಭದಲ್ಲಿ. ಇಂಥ ಸಂದರ್ಭದಲ್ಲಿ ಮಾಡಿಸದೇ ಇದ್ದರೆ ಬೇರೆ ಸಂದರ್ಭದಲ್ಲಿ ಆಗುವುದಿಲ್ಲ. ಇಲ್ಲಿ ಕಾಂಗ್ರೆಸ್ ಇರುವುದು ಅಲ್ಲಿ ಜನತಾ ದಳ ಇರುವುದು ಅಥವಾ ಇಲ್ಲಿ ಜನತಾ ದಳ ಇರುವುದು ಅಲ್ಲಿ ಕಾಂಗ್ರೆಸ್ ಇರುವುದು ಅಲ್ಲಿ ಜನತಾ ದಳ ಇರುವುದು ಅಥವಾ ಇಲ್ಲಿ ಜನತಾ ದಳ ಇರುವುದು ಅಲ್ಲಿ ಕಾಂಗ್ರೆಸ್ ಇರುವುದು ಆ ಸಂದರ್ಭದಲ್ಲಿ ಈ ಒಂದು ವ್ಯತ್ಯಾಸ ಆಗುತ್ತಲೇ ಬಂದಿದೆ. ಕೇಂದ್ರಸರ್ಕಾರಕ್ಕೆ ಬರುತ್ತದೆ ಇದು. ಈಗ ಫಿನೂ ತೋರಿಸದ ಹಾಗೆ ಇವರು ಮಾರತಕ್ಕ ವ್ಯವಸ್ಥೆಯನ್ನು ಮಾಡಿದರೆ ಪ್ರತಿಯೊಂದು ಸಕ್ಕರೆ ಕಂಪನಿಯೂ ಒಂದು ಕೋಟಿಯಿಂದ ಎರಡು ಕೋಟಿ ರೂಪಾಯಿವರೆಗೆ ಬರೀ ಬಡ್ಡಿ ಕಟ್ಟುತ್ತಿದ್ದಾರೆ ಸಕ್ಕರೆ ಚೀಲದ ಮೇಲೆ. ಇದನ್ನು ತಪ್ಪಿಸಿ ರೈತರಿಗೆ ಹೆಚ್ಚು ಹಣವನ್ನು ಕೊಡುವುದಕ್ಕೆ ಸರ್ಕಾರಕ್ಕೆ ನಾನು ಒಂದು ಸಲಹೆಯನ್ನು ಕೊಡುತ್ತಿದ್ದೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾತನಾಡಿದಂಥ ಮಾನ್ಯ ಪುಟ್ಟಣ್ಣಯ್ಯನವರು ಸವಿಸ್ತಾರವಾಗಿ ಎಲ್ಲ ವಿಷಯಗಳನ್ನು ತಿಳಿಸಿದ್ದಾರೆ. ಒಂದಂತೂ ಸ್ಪಷ್ಟವಾದಂಥ ಸಂಗತಿ, ಯಾರು ಹೊಲಗದ್ದೆಗಳಲ್ಲಿ ಬೆವರು ಸುರಿಸಿ ದಿನದ ಇಪ್ಪತ್ನಾಲ್ಕು ಗಂಟೆಗಳಲ್ಲಿ ಸುಮಾರು ಹದಿನೈದು ಗಂಟೆ ಕೆಲಸ ಮಾಡಿ ದುಡಿಯುತ್ತಾನೋ, ಅವನು ಬೆಳೆದಂಥ ಬೆಳೆಗೆ ಒಂದು ವೈಜ್ಞಾನಿಕವಾದಂಥ ಬೆಲೆ ಸಿಗುತ್ತಿಲ್ಲ, ಕಬ್ಬಿನಲ್ಲೂ ಅದೇ ಸ್ಥಿತಿ ಇರುವಂಥಾದ್ದು ನಿರ್ವಿವಾದವಾಗಿರುವಂಥ ಸಂಗತಿ. ಇವತ್ತು ಎಲ್ಲ ವಸ್ತುಗಳ ಬೆಲೆ ಗಗನಕ್ಕೆ ಏರುತ್ತಿದೆ, ಆದರೆ, ರೈತ ಬೆಳೆದಿರುವಂಥ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ ಎನ್ನುವಂಥಾದ್ದು ಚರ್ಚೆಯಾಗುತ್ತಾ ಇದೆ. ನಾನು ಸರ್ಕಾರಕ್ಕೆ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ತಾವೇ ಒಪ್ಪಿಕೊಂಡಿರುವ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಕೆಲವು ಕಾರ್ಖಾನೆಗಳಿಂದ 31 ಕೋಟಿ ರೂಪಾಯಿಗಳು ರೈತರಿಗೆ ಬಾಕಿ ಬರಬೇಕು. ಕಾರ್ಖಾನೆಗಳಿಗೆ ಹಣ ಕೊಟ್ಟಿದ್ದಾರೆ. ಕಬ್ಬು ಕೊಟ್ಟಿರುವುದರ ಬಗ್ಗೆ ನಾನು ಮಾತನಾಡುತ್ತಿರುವುದು. ಸರ್ಕಾರಕ್ಕೆ ಇದರ ಬಗ್ಗೆ ಒಂದು ಜವಾಬ್ದಾರಿ ಇಲ್ವಾ? 31 ಕೋಟಿ ರೂಪಾಯಿಗಳು ರೈತರಿಗೆ ಬಾಕಿ ಬರಬೇಕಾಗಿರುವಾಗ ಅದನ್ನು ಯಾವಾಗ ಕೊಡಿಸುತ್ತೀರಾ? ಬಡ್ಡಿ ಸಹಿತ ಕೊಡಿಸ್ತೀರಾ? ಅದಕ್ಕೆ ಏನಾದರೂ ತೀವ್ರವಾದಂಥ ಕ್ರಮವನ್ನು ಕಾರ್ಖಾನೆಗಳ ಮೇಲೆ ತೆಗೆದುಕೊಳ್ಳುತ್ತೀರಾ? ಬೀದರ ಜಿಲ್ಲೆಯಲ್ಲಿ ಹತ್ತು ಸಾವಿರ ಕಬ್ಬುಬೆಳೆಗಾರರ ಒಂದು ಸಂಘಟನೆಯಾಗಿ ರೈತರು ಹೈಕೋರ್ಟ್‌ಗೆ ಹೋದರು, ಏನಂತ? ಅಲ್ಲಿರುವಂಥ ಸಕ್ಕರೆ ಕಾರ್ಖಾನೆ ಮಾಲೀಕ ಖುಷಿ ಬಂದಂತೆ ಆ ಜಿಲ್ಲೆಯಲ್ಲಿ ಕಬ್ಬಿಗೆ ಒಂದು ಬೆಲೆಯನ್ನು ಕೊಡುತ್ತಿದ್ದಾನೆ.

ಅಧ್ಯಕ್ಷರು:- ಈಗ ಯಡಿಯೂರಪ್ಪನವರೇ, ನಾನು ಏನು ಹೇಳುತ್ತೇನೆ ಎಂದರೆ, ಒಂದು ಕ್ಷಣಕಾಲ ನಾವು ರಾಜಕಾರಣಿಗಳು ಎಂದು ಮರೆತುಬಿಡೋಣ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮಗೆ ಯಾವುದೋ ದೊಡ್ಡ ಜವಾಬ್ದಾರಿ ಇದೆಯೆಂದು ತಿಳಿದುಕೊಳ್ಳೋಣ. ಇದನ್ನೇ ನಾನು ಹೇಳಿದ್ದು. ಮಾನ್ಯ ಬೈರೇಗೌಡರು ಇಲ್ಲಿದ್ದಾರೆ, ಅವರೂ ಒಪ್ಪುತ್ತಾರೆ. ಒಂದು ಚೀಲದಲ್ಲಿ ಸಿಮೆಂಟ್ ಬಂದರೆ ಅದಕ್ಕೆ ಪ್ರೈಸ್ ಫಿಕ್ಸ್ ಆಗಿರುತ್ತದೆ. ಅದರ ಮೇಲೇ ಬರೆದು ಬಿಟ್ಟಿರುತ್ತಾರೆ. ಒಂದು ಚೀಲದಲ್ಲಿ ಅಕ್ಕಿ ಬಂದರೆ, ರಾಗಿ ಬಂದರೆ, ಜೋಳ ಬಂದರೆ ಅಥವಾ ಆಲೂಗಡ್ಡೆ ಬಂದರೆ ಅದಕ್ಕೆ ಪ್ರೈಸ್ ಇಲ್ಲ. ಗುಂಡುಪಿನ್ನು ಇದ್ದರೆ ಅದಕ್ಕೆ ಒಂದು ಪ್ರೈಸ್ ಫಿಕ್ಸ್ ಮಾಡ್ತಾರೆ. ಎಲ್ಲರ ಮಾನವಶಕ್ತಿ ಏನಿದೆ, ಎಲ್ಲರೂ ಇನ್ವೆಸ್ಟ್ ಮಾಡುವ ಎನರ್ಜಿಗೂ ಕೂಡ ಒಂದಷ್ಟು ಪ್ರೈಸ್ ಐಡೆಂಟಿಫೈ ಮಾಡಿದ್ದೀವಿ. ಆದರೆ, ಅಗ್ರಿಕಲ್ಚರಿಸ್ಟ್ ಯಾವನು ಇದ್ದಾನೆ, ಯಾರು ತನ್ನ ಶ್ರಮವನ್ನು ಇನ್ವೆಸ್ಟ್ ಮಾಡುತ್ತಾನೆ ಅದೊಂದಕ್ಕೆ ನಾವು ಪ್ರೈಸನ್ನು ಫಿಕ್ಸ್ ಮಾಡಿಲ್ಲ. ಇದು ಬಹಳ ದೊಡ್ಡ ಸಮಸ್ಯೆ. ಬರೇ ಕಬ್ಬಿಗೆ ಸೀಮಿತವಾಗಿ ಮಾತನಾಡತಕ್ಕಂಥಾದ್ದೂ ಅಲ್ಲ. ಒಂದು ಇಡೀ ದಿವಸ ಇದರ ಬಗ್ಗೆ ಚರ್ಚೆ ಮಾಡೋಣ. ಅದಕ್ಕೆ ನಾವು ಎರಡನೇ ದರ್ಜೆ ಪ್ರಜೆಗಳಾಗಿ ಬದುಕುತ್ತಾ ಇರುವುದು. ಈಗ ಊರುಗಳಿಂದ ಉದ್ಯೋಗ ಕೊಡಿ ಎಂದು ಬೆಂಗಳೂರಿಗೆ ಜನರು ಬರುತ್ತಿರುವ ಉದ್ದೇಶವೇ ಇದು. ಅಲ್ಲಿ ಬದುಕುವುದಕ್ಕೆ ಆಗುವುದಿಲ್ಲ ಎಂದು. ಒಂದು ಡೈರಿ ಇಟ್ಟು ಹಾಲು ಉತ್ಪಾದನೆ ಮಾಡತಕ್ಕಂಥವನಿಗೆ, ಅವನು ಎಷ್ಟು ಗಂಟೆ ದುಡಿಯುತ್ತಾನೆ, ಅವನಿಗೆ ಎಷ್ಟು ಸಿಗಬೇಕು ಎನ್ನುವುದರ ಬಗ್ಗೆ ನಾವು ಬೆಲೆ ನಿಗದಿ ಮಾಡಿಲ್ಲ. ನಮ್ಮ ಸಿಸ್ಟಮ್ಮೇ ಆ ತರಹ ಇದೆ. ಆದ್ದರಿಂದ let us try to go on a larger plain.

ಶ್ರೀ ಬಿ.ಎಸ್.ಯಡಿಯೂರಪ್ಪ:- ನನಗೆ ದುಃಖ ತರುವ ಸಂಗತಿ ಎಂದರೆ, ಈಗ ತಾನೆ ಕೆಲವು ಸ್ನೇಹಿತರು ಕಾರ್ಖಾನೆಯನ್ನು ಕೋಆಪರೇಟಿವ್‌ನಲ್ಲಿ ಚೆನ್ನಾಗಿ ನಡೆಸುತ್ತಿದ್ದು ರೈತರಿಗೆ ಕೇಂದ್ರಸರ್ಕಾರದವರು ಕೊಡುವುದಕ್ಕಿಂತ ಹೆಚ್ಚು ಕೊಡುತ್ತಿದ್ದೇವೆ, ಎಂದರು. ಕೇಂದ್ರಸರ್ಕಾರ ನಿಗದಿ ಮಾಡಿದ ಬೆಲೆಗಿಂತ ಹೆಚ್ಚು ಕೊಡುವಂಥ ಶಕ್ತಿಯನ್ನು ಕೊಟ್ಟಿದ್ದಾನೆ ಆ ರೈತ. ನಿಮ್ಮ ಇನ್ವೆಸ್ಟ್‌ಮೆಂಟ್‌ಗೆ ಹತ್ತು ಪಟ್ಟು ಶ್ರಮ ಹಾಕಿ ಆ ಕಾರ್ಖಾನೆ ಉಳಿಯುವುದಕ್ಕೆ, ಮತ್ತು ಇವತ್ತು ಅನೇಕ ರೀತಿಯ ವ್ಯವಹಾರಗಳು ನಡೆಯುವುದಕ್ಕೆ ಕೆಲಸ ಮಾಡಿದ್ದಾನೆ.

ಅಧ್ಯಕ್ಷರು:- ರೈತ, ಶಕ್ತಿ ಕೊಟ್ಟಿದ್ದಾನೆ. ಅದರ ಜೊತೆಗೆ ಬಹಳ ಮುಖ್ಯವಾದುದು ಎಂದರೆ ಸರ್ಕಾರಗಳು ಫಿಕ್ಸ್ ಮಾಡಿದ ಪ್ರೈಸ್ ಅನ್‌ರಿಯಲಿಸ್ಟಿಕ್ ಎಂದು ಆಯಿತಲ್ಲ; because factories can pay more. ಅಂತ ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅದನ್ನಾದರೂ ಕೊಡಲಿ. ಅಧ್ಯಕ್ಷರೇ, ತಾವು ಹೇಳಿದ ಹಾಗೆ ಇದು ನಿರ್ವಿವಾದವಾಗಿರತಕ್ಕಂಥ ಸಂಗತಿ. ವೈಜ್ಞಾನಿಕವಾಗಿ ರೈತ

ಬೆಳೆದಂಥ ಯಾವುದೇ ಬೆಳೆಗೆ ಸರಿಯಾದಂಥ ಬೆಲೆ ಕೊಟ್ಟಿಲ್ಲ ಎನ್ನುವುದು ಎಲ್ಲರಿಗೂ ಗೊತ್ತು. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ಬೀದರ್ ಜಿಲ್ಲೆಯವರು ಹೈಕೋರ್ಟ್‌ನಲ್ಲಿ ಕೇಸು ಹಾಕಿದ್ದಾರೆ. ಹತ್ತು ಸಾವಿರ ಜನ ರೈತರು ತಮಗೆ ಆ ಒಂದು ಜಿಲ್ಲೆಯಲ್ಲಿ ಸರಿಯಾದ ಬೆಲೆ ಕೊಡಲಿಲ್ಲ ಎಂದು ಹೇಳಿ ಕೋರ್ಟಿಗೆ ಹೋದರು. ಏನಾಯಿತು ಅಲ್ಲಿ? ಕೇಂದ್ರಸರ್ಕಾರ ಸಪೋರ್ಟ್ ಪ್ರೈಸ್‌ನ್ನು ಫಿಕ್ಸ್ ಮಾಡಿದೆ. ಸನ್ಮಾನ್ಯ ಸಚಿವರು ತಾವು ಉತ್ತರ ಕೊಡುವಂಥ ಕಾಲದಲ್ಲಿ ಹೇಳಬೇಕು, ತಾವು ಗೆಜೆಟ್ ನೋಟಿಫಿಕೇಶನ್ ಮಾಡಲಿಲ್ಲ. ಅದರ ಪರಿಣಾಮವಾಗಿ ಬೀದರ್ ಜಿಲ್ಲೆಯಲ್ಲಿರುವಂಥ ರೈತನ ಸರ್ವನಾಶವಾಯಿತು. ಕೋರ್ಟಿನಲ್ಲಿ ನಿಮ್ಮ ರಾಜ್ಯ ಸರ್ಕಾರಕ್ಕೆ ಒಂದು ಹೇಳಿಕೆಯನ್ನು ಕೊಡಬೇಕಾಯಿತು. ಷುಗರ್ ಫ್ಯಾಕ್ಟರಿ ಮಾಲೀಕ ಹೇಳುತ್ತಾನೆ, ಅಲ್ಲಿ ಗೆಜೆಟ್ ನೋಟಿಫಕೇಶನ್ ಆಗಿಲ್ಲ, ಅದಕ್ಕೋಸ್ಕರ ನಾನು ಖುಷಿ ಬಂದು ರೇಟ್ ಕೊಟ್ಟಿದ್ದೇನೆ ಎಂದು. ಕೋರ್ಟಿನಲ್ಲಿ ಸರ್ಕಾರ ಒಪ್ಪಿಕೊಂಡಿತು, ನಾವು ಗೆಜೆಟ್ ನೋಟಿಫಿಕೇಶನ್ ಮಾಡಿಲ್ಲ ಎಂದು ಹೇಳಿ. ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆ ಎಂದರೆ, ನಿಮ್ಮ ಸರ್ಕಾರ ರೈತನ ಪರ ಇದೆಯೋ, ಕಾರ್ಖಾನೆ ಮಾಲೀಕನ ಪರ ಇದೆಯೋ? ತಾವು ಉತ್ತರ ಕೊಡತಕ್ಕಂಥ ಕಾಲದಲ್ಲಿ ಹೇಳಿ. ಎರಡನೆಯದು ತಾವು ಕಬ್ಬು ತಂದುಕೊಡುವುದಕ್ಕೆ ದೂರ ನಿರ್ಧಾರ ಮಾಡುತ್ತೀರಿ. ಇಷ್ಟು ಕಿಲೋಮೀಟರ್ ದೂರದಲ್ಲಿರುವವರು ಇಲ್ಲಿ ಕಬ್ಬು ತಂದುಕೊಡಬೇಕು ಎಂದು ಆಯಿತು. ಕಬ್ಬು ಕೊಟ್ಟರೆ, ನಿಗದಿಯಾದಂಥ ಸಮಯಕ್ಕೆ ಬೆಳೆಗೆ ದುಡ್ಡು ಕೊಡುವುದಿಲ್ಲ. ನಿಮಗೆ ಕೇಂದ್ರಸರ್ಕಾರದ ನಿಯಮಾವಳಿ ಇದೆ. ಈ ಕಬ್ಬು ನಿಯಂತ್ರಣ ಆದೇಶದ ಪ್ರಕಾರ, ತಾವೇ ಹೇಳಿದ ಪ್ರಕಾರ 'ಸಕ್ಕರೆ ಕಾರ್ಖಾನೆ ಕೇಂದ್ರಸರ್ಕಾರ ನಿಗದಿಪಡಿಸಿದ ಶಾಸನಬದ್ಧ ಬೆಲೆಯನ್ನು ಕೊಡಲು ಬದ್ಧವಾಗಿರುತ್ತದೆ. ಈ ಬೆಲೆಯನ್ನು ಕಾರ್ಖಾನೆಯು ಕಬ್ಬು ಖರೀದಿಸಿದ ಹದಿನಾಲ್ಕು ದಿವಸದೊಳಗಡೆ ಪಾವತಿ ಮಾಡಬೇಕು. ಹಾಗೆ ಕಾನೂನು ಇದೆ. ಆದರೆ, ಹದಿನಾಲ್ಕು ವರ್ಷಗಳಾದರೂ ಕೊಡಲಿಲ್ಲ. ನಾನು ಹೇಳುತ್ತಿದ್ದೇನೆ, ಈ ಏರಿಯಾ ರಿಸ್ಟ್ರಿಕ್ಷನ್ ಅನ್ನು ಕಿತ್ತೊಗೆದುಬಿಡಿ. ಅವನು ಬೆಲ್ಲ ಮಾಡುತ್ತಾನೋ, ಕಾಕಂಬಿ ಮಾಡುತ್ತಾನೋ, ಎಲ್ಲಿಗೆ ಬೇಕಾದರೂ ಮಾರಿಕೊಳ್ಳುತ್ತಾನೆ, ಅವನು ಬದುಕುತ್ತಾನೆ. ಬೇಕಾದ ಕಾರ್ಖಾನೆಗೆ ಅವನು ಕಬ್ಬನ್ನು ಕೊಡುತ್ತಾನೆ, ಕಾರ್ಖಾನೆ ಉಳಿಯಬೇಕು ಎಂದು ರಿಸ್ಟ್ರಿಕ್ಟ್ ಮಾಡುತ್ತೀರಿ, ಏರಿಯಾ ರಿಸ್ಟ್ರಿಕ್ಷನ್ ಮಾಡುತ್ತೀರಾ. ಹೋದವರ್ಷ ಏನಾಯಿತು? ಲಕ್ಷಾಂತರ ಟನ್ ಕಬ್ಬನ್ನು ಸುಟ್ಟು ಬೆಂಕಿ ಹಚ್ಚಿಬಿಟ್ಟರು. ಈ ಏರಿಯಾ ರಿಸ್ಟ್ರಿಕ್ಷನ್ ಮಾಡಿದಂಥ ಕಾಲದಲ್ಲಿ ಸುತ್ತಮುತ್ತ ರೈತರು ಹೆಚ್ಚು ಬೆಳೆದಂಥ ಕಬ್ಬನ್ನು ತೆಗೆದುಕೊಳ್ಳುವಂಥ ವ್ಯವಸ್ಥೆ ಆಗಲಿಲ್ಲ. ಅವನ ಸರ್ವನಾಶವಾಯಿತು. ಅದಕ್ಕೋಸ್ಕರ ತಾವು ಉತ್ತರ ಕೊಡತಕ್ಕಂಥ ಕಾಲದಲ್ಲಿ ಕೇಂದ್ರ ಎಲ್ಲ ಸರ್ಕಾರದಮೇಲೆ ಎಲ್ಲ ಸಂಗತಿಗಳನ್ನು ಹೇಳುತ್ತೀರಿ. ಹೌದು, ಇದು ಕೇಂದ್ರಸರ್ಕಾರದ ಕಂಟ್ರೋಲ್‌ನಲ್ಲಿ ಬರುತ್ತದೆ. ಆದರೆ ನೀವು ಇಂತಹ ಪರಿಸ್ಥಿತಿ ಇರುವಾಗ ಕೇಂದ್ರಸರ್ಕಾರದ ಮನವೊಲಿಸಲಿಕ್ಕೆ ರಾಜ್ಯಸರ್ಕಾರದ ಪ್ರಯತ್ನ ಏನಿದೆ? ಆದ್ದರಿಂದ, ಈ ತರಹ ಪರಿಸ್ಥಿತಿ

ಇಲ್ಲಿ ಇರುವಾಗ, ಈ ಬಗ್ಗೆ ಸಹ ತಾವು ವಿಶೇಷವಾದಂಥ ಗಮನವನ್ನು ಕೊಡಬೇಕು. ಹಿಂದೆ ನಮ್ಮ ಶಿವಮೊಗ್ಗದಲ್ಲಿ ಒಂದು ಸಕ್ಕರೆ ಕಾರ್ಖಾನೆ ಇತ್ತು. ದೇವಿ ಸಕ್ಕರೆ ಕಾರ್ಖಾನೆ. ಪರ್ಚೇಸ್ ಟ್ಯಾಕ್ಸ್ ಒಂದೂವರೆ ಕೋಟಿರೂಪಾಯಿಗಳನ್ನು ಆತ ಬಾಕಿ ಕೊಡಬೇಕಾಗಿದೆ. ಹಿಂದೆ ನಮ್ಮ ಕಾಂಗ್ರೆಸ್ ಸ್ನೇಹಿತರು ಅಧಿಕಾರದಲ್ಲಿದ್ದಾಗ ಅದಕ್ಕೆ ಎಕ್ಸಂಪಶನ್ ಕೊಟ್ಟುಬಿಟ್ಟರು. ರೈತರಿಂದ ಖರೀದಿ ಮಾಡಿದ್ದಾನೆ, ಟ್ಯಾಕ್ಸ್ ಕಟ್ಟಿದ್ದಾನೆ. ಆ ದುಡ್ಡನ್ನು ರಾಜ್ಯಸರ್ಕಾರಕ್ಕೆ ಕಟ್ಟಬೇಕಾಗಿತ್ತು, ಅದಕ್ಕೆ ಎಕ್ಸಂಪಶನ್ ಕೊಟ್ಟರು. ಆವಾಗ ನಾನು ಇಲ್ಲೇ ಕೂಗಿದ್ದೆ, ಅವನು ಏನೋ ಸಂಚು ನಡೆಸಿದ್ದಾನೆ, ನೀವು ಪರ್ಚೇಸ್ ಟ್ಯಾಕ್ಸ್‌ಗೆ ಎಕ್ಸಂಪಶನ್ ಕೊಡುತ್ತಿದ್ದೀರೋ, ಅವನು ಕಾರ್ಖಾನೆ ಮಾರಿಕೊಂಡು ಹೋಗುತ್ತಾನೆ ಎಂದು. ಹಾಗೆ ನಾವು ಹೇಳಿದೆವು. ಹಾಗೆಯೇ ಅವನು ಕಾರ್ಖಾನೆಯನ್ನು ಮಾರಿಕೊಂಡೇ ಹೋದ. ಅಂದರೆ ಯಾವ್ಯಾವ ಸಮಯದಲ್ಲಿ ತಮ್ಮ ಹಿಡಿತವನ್ನು ಇಟ್ಟುಕೊಳ್ಳಬೇಕಾಗಿತ್ತೋ, ಅದು ಆಗಲಿಲ್ಲ. ಅದರ ಪರಿಣಾಮವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಆ ದೇವಿ ಸಕ್ಕರೆ ಕಾರ್ಖಾನೆ ಇವತ್ತು ಬಾಗಿಲು ಹಾಕುತ್ತಿದೆ, ಹೇಳುವವರು ಕೇಳುವವರು ಯಾರೂ ಇಲ್ಲ. ರೈತ ಬೀದಿಪಾಲಾದ. ಇಲ್ಲೇ ನಮ್ಮ ಸರ್ಕಾರ ಉತ್ತರ ಕೊಟ್ಟಿತು. ಇವತ್ತು ಶುಗರ್ ಫ್ಯಾಕ್ಟರಿಗೆ ಲೈಸೆನ್ಸ್ ಕೊಡುವುದು ಕೇಂದ್ರಸರ್ಕಾರ ಸ್ವಾಮಿ. ಅವನು ಸರಿಯಾಗಿ ನಡೆಸದೇ ಇದ್ದರೆ, ಅದನ್ನು ರದ್ದು ಮಾಡುವುದಕ್ಕೆ ಟೇಕ್ ಓವರ್ ಮಾಡುವುದಕ್ಕೆ ನಿಮಗೆ ಅಧಿಕಾರ ಇದೆ. ಇವತ್ತು ರಾಷ್ಟ್ರಪತಿಗೆ ಎಂದು ಹೇಳುತ್ತಿದ್ದೀರಿ. ಕಾನೂನಿನಲ್ಲಿ ನೋಡಿ, ಲೀಗಲ್ ಅಡ್ವೈಸರ್‌ನ್ನು ಕೇಳಿ ಎಕ್ಸಪರ್ಟ್ ಅಭಿಪ್ರಾಯವನ್ನು ತೆಗೆದುಕೊಂಡು ನಾವೇ ಇಲ್ಲಿ ಮಾಡುವುದಕ್ಕೆ ಬರುತ್ತದೆ. ಆದರೆ ಇವತ್ತು ಒಂದು ಕತೆಯನ್ನು ಹೇಳಿಕೊಂಡು ಆ ಕಾರ್ಖಾನೆ ಬಾಗಿಲು ಹಾಕಿದೆ. ಇದುವರೆಗೂ ಅದನ್ನು ಟೇಕ್‌ಓವರ್ ಮಾಡಿ ರೈತರನ್ನು ಉಳಿಸುವಂಥ ಪ್ರಯತ್ನ ಆಗಲಿಲ್ಲ. ಆದ್ದರಿಂದ ನನ್ನ ಒತ್ತಾಯ ಎಂದರೆ, ವೈಜ್ಞಾನಿಕ ಬೆಲೆಯನ್ನು ನಿಗದಿ ಮಾಡಲು ಕೇಂದ್ರಸರ್ಕಾರಕ್ಕೆ ಒತ್ತಾಯವನ್ನು ತರಬೇಕಾಗಿದೆ. ಕನಿಷ್ಟ ಇವತ್ತು ಮೊಲ್ಯಾಸಿಸ್ ಬೆಲೆ ಅವರು ಹೇಳಿದಹಾಗೆ, ಇಷ್ಟು ದೊಡ್ಡ ಪ್ರಮಾಣದಲ್ಲಿ ರೇಟು ಇವತ್ತು ಮೂರು ಸಾವಿರ ಒಂದು ಟನ್‌ಗೆ ಇರುವಂಥ ಈ ಕಾಲದಲ್ಲಿ ನೀವು ಕನಿಷ್ಟ 1,100-1,200 ರೂಪಾಯಿಗಳ ಒಂದು ಬೆಂಬಲ ಬೆಲೆಯನ್ನು ಇವತ್ತು ಘೋಷಣೆ ಮಾಡಿಸಬೇಕಾಗುತ್ತದೆ. ಆವಾಗ ಮಾತ್ರ ರೈತ ಬದುಕುತ್ತಾನೆ. ಇಲ್ಲದಿದ್ದರೆ ಕಬ್ಬು ಬೆಳೆಯುವುದನ್ನು ಆತ ಬಿಡಬೇಕಾಗುತ್ತದೆ. ಈ ಕಡೆಗೆ ತಾವು ವಿಶೇಷವಾದ ಗಮನವನ್ನು ಕೊಟ್ಟು ಮೊದಲು ಇವತ್ತು ಏನು ಬಾಕಿ ಇದೆ, ಆ ಹಣವನ್ನು ಕೊಡಲಿಕ್ಕೆ ಪ್ರಯತ್ನವನ್ನು ತಾವು ಮಾಡಬೇಕು. ಆ ದಿಕ್ಕಿನಲ್ಲಿ ತಾವು ಉತ್ತರ ಕೊಡಬೇಕೆಂದು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಮಂತ್ರಿಗಳು.

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ರಾಜ್ಯಮಂತ್ರಿ):- ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು:- ಬಹಳ ಜನ ಸದಸ್ಯರಿಗೆ ಹೊಟ್ಟೆಯಲ್ಲಿ ಸಕ್ಕರೆ ಉತ್ಪತ್ತಿ ಹೆಚ್ಚಾಗಿದೆ; ತೊಂದರೆಯಾಗಿದೆ. ಆದ್ದರಿಂದ ಆದಷ್ಟು ಬೇಗ ಮುಗಿಸಿ.

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಸಭಾಧ್ಯಕ್ಷರೇ, ಕೃಷಿ ಪ್ರಧಾನವಾದ ಈ ದೇಶದಲ್ಲಿ ಕೃಷಿ ಉತ್ಪನ್ನವಾದಂಥ ಈ ಕಬ್ಬು ಬೆಳೆಗೆ ವೈಜ್ಞಾನಿಕ ಬೆಲೆಯನ್ನು ಕೊಡಲಿಕ್ಕೆ ಆಗಲಿಲ್ಲ ಎನ್ನುವ ಬಗ್ಗೆ ಸದನದಲ್ಲಿ ಚರ್ಚೆಬೇಡ. ಈ ದೇಶದಲ್ಲಿ ಬೆಳೆದಂಥ ಎಲ್ಲ ಬೆಳೆಗಳಿಗೆ ಸಂಬಂಧಪಟ್ಟ ಹಾಗೆ ಚರ್ಚೆ ಮಾಡಬೇಕಾಗುತ್ತದೆ. ಏಕೆಂದರೆ ಎಲ್ಲ ಸದಸ್ಯರುಗಳು ಹೇಳಿದ ಹಾಗೆ ಕಬ್ಬು ಬೆಳೆಯಬೇಕಾದರೆ ಹೆಚ್ಚು ಖರ್ಚಾಗುತ್ತದೆ ಎಂಬುದರ ಬಗ್ಗೆ ನನಗೂ ಕೂಡ ಮನವರಿಕೆ ಇದೆ. ಆದರೆ, ಅದಕ್ಕೆ ಜೊತೆಯಲ್ಲೇನೆ ಈ ದೇಶದಲ್ಲಿ ಈ ರಾಜ್ಯದಲ್ಲಿ ಉತ್ಪನ್ನವಾಗತಕ್ಕಂಥ ಸಕ್ಕರೆ ಯಾವ ಬೆಲೆಗೆ ಮಾರಲಾಗುತ್ತದೆ, ಉತ್ಪಾದನೆಯಾಗಿ ಬಾಕಿ ಉಳಿದಂಥ ಮೊಲ್ಯಾಸಿಸ್ ಯಾವ ಬೆಲೆಗೆ ಮಾರಲಾಗುತ್ತದೆ, ಅದರ ಜೊತೆಗೆ ಬಗಾಸ್ ಯಾವ ಬೆಲೆಗೆ ಮಾರಲಾಗುತ್ತದೆ, ಇದೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಕಬ್ಬನ್ನು ತಂದು ಕಾರ್ಖಾನೆಯಲ್ಲಿ ಅದನ್ನು ನುರಿಸಿ ಅದನ್ನು ಸಕ್ಕರೆ ಮಾಡಬೇಕಾದರೆ ಎಷ್ಟು ಖರ್ಚು ಬರುತ್ತದೆ, ಇದೆಲ್ಲ ಲೆಕ್ಕಹಾಕಿ ಹೇಳುವುದಾದರೆ ಕಳೆದ ಮೂರು ವರ್ಷಗಳಿಂದ ಮಾನ್ಯ ಎಲ್ಲ ಸದಸ್ಯರುಗಳು ಗಮನಿಸಬೇಕಾಗುತ್ತದೆ. ಸಾಧಾರಣ 1,200 ರೂಪಾಯಿಗಳಿಂದ ಹಿಡಿದುಕೊಂಡು 1,300 ರೂಪಾಯಿಗಳ ಸಕ್ಕರೆ ಮಾರಿದ್ದಾರೆ. ಕಳೆದ ಮೂರು ವರ್ಷಗಳಿಂದ ಸತತವಾಗಿ ತಾವು ನೋಡುವುದಾದರೆ, 1,100, 1200 ಮತ್ತು 1,300 ಈರೀತಿ ಸಕ್ಕರೆ ಮಾರ್ಕೆಟ್‌ನಲ್ಲಿ ಮಾರಿಕೊಂಡು ಬರಲಾಗಿದೆ. ಇದರ ಜೊತೆಗೆ ನಾವು ರೈತನು ಬೆಳೆಯುವಂಥ ಕಬ್ಬಿನ ಬೆಲೆಯನ್ನು ನೋಡಿದಾಗ ಫರ್ಟಿಲೈಸರ್ಸ್ ತೆಗೆದುಕೊಳ್ಳಿ, ಡೀಸೆಲ್ ತೆಗೆದುಕೊಳ್ಳಿ, ಎಲೆಕ್ಟ್ರಿಸಿಟಿ ತೆಗೆದುಕೊಳ್ಳಿ ಇದೆಲ್ಲ ಒಂದುಕಡೆ ಒಟ್ಟಾಗುತ್ತಾ ಬಂದಿದೆ. ಅದನ್ನು ಆಧರಿಸಿ ರೈತ ನಮಗೆ ಕಬ್ಬಿಗೆ ಬೆಲೆ ಇಷ್ಟು ಕೊಡಬೇಕು ಇನ್ನೂ ಹೆಚ್ಚು ಕೊಡಬೇಕು, ನಮಗೆ ಖರ್ಚು ಹೆಚ್ಚಾಗಿದೆ ಎಂದು ರೈತ ಹೇಳುವುದು ನಿಜ ಇದೆ. ಆದರೆ, ಇದರ ಬಗ್ಗೆ ಈ ದೇಶದಲ್ಲಿ, ಈ ರಾಜ್ಯದಲ್ಲಿ ಸಮಗ್ರ ಚಿಂತನೆ ಆಗಬೇಕಾಗುತ್ತದೆ. ಆ ಮಟ್ಟಕ್ಕೆ ಹೋಗುವುದು ಬೇಡ. ಇವತ್ತು ರಾಜ್ಯದಲ್ಲಿ ಇರುವ ಕಬ್ಬಿನ ಸಮಸ್ಯೆ ಬಗ್ಗೆ, ಬಾಕಿ ಕೊಡುವ ಬಗ್ಗೆ, ಮುಂದಿನ ಕಬ್ಬಿನ ಬೆಲೆ ನಿಗದಿಮಾಡುವ ಬಗ್ಗೆ ಸ್ವಲ್ಪ ಹೇಳಿ ಮುಗಿಸುವ ಪ್ರಯತ್ನ ಮಾಡುತ್ತೇನೆ.

2.10 ಪಿ.ಎಂ.

ಮಾನ್ಯ ಹಿರಿಯ ಸದಸ್ಯರಾದ ಯಡಿಯೂರಪ್ಪನವರು ಮತ್ತು ಪುಟ್ಟಣ್ಣಯ್ಯನವರು ಹೇಳಿದಹಾಗೆ ರಾಜ್ಯದಲ್ಲಿ 31 ಕೋಟಿ ರೂಪಾಯಿಗಳು ಸಕ್ಕರೆ ಕಾರ್ಖಾನೆಗಳಿಂದ ಬಾಕಿ ಬರಬೇಕಾಗಿದೆ. ಮೊದಲನೆಯದಾಗಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಸುಮಾರು 10 ಕೋಟಿ 85 ಲಕ್ಷ ರೂಪಾಯಿಗಳು ರೈತರ ಬಾಕಿ ಬರಬೇಕಾಗಿದೆ. ಇದಕ್ಕೆ ನಾನು ಯಾವುದೇ ರಾಜಕೀಯ ಬಣ್ಣವನ್ನು ಬಳಿಯುತ್ತಾ ಇಲ್ಲ, 1993-94 ಮತ್ತು

1994-95ರಲ್ಲಿ ಆ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿ ಮತ್ತು ಅಲ್ಲಿರುವ ಜಿಲ್ಲಾಧಿಕಾರಿಗಳು ಎಲ್ಲರು ತೆಗೆದುಕೊಂಡಿರುವ ತೀರ್ಮಾನದಿಂದ ಆ ಬಾಕಿ ಆಗುವುದಕ್ಕೆ ಕಾರಣವಾಯಿತು. 1993-94ರಲ್ಲಿ ರಾಜ್ಯದಾದ್ಯಂತ ಚುನಾವಣೆ ನಡೆಯಿತು ನಾನು ಈ ಮಾತನ್ನು ಯಾವುದೇ ರಾಜಕೀಯ ಬಣ್ಣ ಬಳೆಯಬೇಕೆಂಬ ಉದ್ದೇಶದಿಂದ ಹೇಳುತ್ತಾ ಇಲ್ಲ, ಆಗಿನ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿ 700 ರೂಪಾಯಿಗಳ ಬೆಲೆಯನ್ನು ಘೋಷಣೆ ಮಾಡಿದರು, ಆಗಿನ ಮುಖ್ಯಮಂತ್ರಿಗಳು ಯಾರು ಇದ್ದರು ಅವರು ಈ ರೀತಿ ಮಾಡಿದರು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೆಪಲ್ಲಿ):- ಪಾಟೀಲರು ಇಲ್ಲವಾದರೆ ದೇವೆಗೌಡರು ಎಂದಲ್ಲವೆ?

ಅಧ್ಯಕ್ಷರು: ಯಾರು ಆದರೂ ಆಗಲಿ ವಾಟಾಳ್ ನಾಗರಾಜ್‌ರವರಂತೂ ಅಲ್ಲ.

ಶ್ರೀ ವಾಟಾಳ್ ನಾಗರಾಜ್: ನನಗೆ ಇನ್ನೂ ಆ ಸೌಭಾಗ್ಯ ಬಂದಿಲ್ವೇ?

ಶ್ರೀ ಉಮೇಶ್ ವಿ.ಕತ್ತಿ: ಆ ಕಾರಣ ಒಂದು ಟನ್‌ಗೆ ಕೊಡಬೇಕಾಗಿದ್ದ ರೇಟ್‌ಗಿಂತ 212 ರೂಪಾಯಿಗಳನ್ನು ಹೆಚ್ಚಿಗೆ ಕೊಡಬೇಕಾದ ಪ್ರಸಂಗ ಬಂತು. ಹೀಗಾಗಿ ಆ ಕಾರ್ಖಾನೆ ತೊಂದರೆಗೆ ಈಡಾಯಿತು. 1994-95ರಲ್ಲಿ ಜಿಲ್ಲಾ ಅಧಿಕಾರಿಗಳು ಮಾಡಿದ್ದರಿಂದ ನಮ್ಮ ಸರ್ಕಾರ ಬಂದ ಮೇಲೆ ಆಡಳಿತ ಮಂಡಳಿಯನ್ನು ರದ್ದು ಮಾಡಿ ಜಿಲ್ಲಾಧಿಕಾರಿಗಳನ್ನು ನೇಮಿಸಿತು. ಆ ಸಮಯದಲ್ಲಿ ಏನಾಯಿತು ಎಂದರೆ ಜಿಲ್ಲಾಧಿಕಾರಿಗಳು ಕಬ್ಬು ಸಿಗಲಿಲ್ಲ, ಆ ಅಧಿಕಾರಿಗೆ ಕಬ್ಬಿನ ಬಗ್ಗೆ ಪರಿಜ್ಞಾನ ಇಲ್ಲವೆಂದು ನನಗೆನ್ನಿಸುತ್ತಿದೆ. ಕಬ್ಬು ಉತ್ಪನ್ನ ಕಡಿಮೆ ಎಂದು ತಿಳಿದುಕೊಂಡು ಬೆಲೆಯನ್ನು ಜಾಸ್ತಿ ಮಾಡಿದರು. ಕಬ್ಬು ಕಸಿ ಕಡಿಮೆಯಾದ ಮೇಲೆ ಈ ಎರಡು ಕಾರಣಗಳಿಂದ ಕಾರ್ಖಾನೆಗಳು ತೊಂದರೆಗೆ ಬಂದವು. ಸುಮಾರು 15 ಕೋಟಿ ರೂಪಾಯಿಗಳ ನಷ್ಟ ಉಂಟಾಯಿತು. ಸರ್ಕಾರದಿಂದ ಮತ್ತು ಸಕ್ಕರೆ ಕಾರ್ಖಾನೆಯಿಂದ ಆರ್ಥಿಕ ಪರಿಸ್ಥಿತಿಯನ್ನು ಎರಡು ಕಡೆಯೊಂದಿಗೆ ಕ್ರಮೇಣ 2 ವರ್ಷಗಳಲ್ಲಿ 6-7 ಕೋಟಿ ರೂಪಾಯಿಗಳ ಹಳೆಯ ಬಾಕಿಯನ್ನು ತೀರಿಸುವಂತಹ ಪ್ರಯತ್ನ ನಮ್ಮ ಸರ್ಕಾರ ಬಂದ ಮೇಲೆ ಮಾಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ 2 ವರ್ಷದಲ್ಲಿ ಅದು 19 ಕೋಟಿ. ರೂಪಾಯಿಗಳು ಬಾಕಿ ಇತ್ತು. ಈಗ ಉಳಿದಿದ್ದು 10.85 ಲಕ್ಷ ರೂಪಾಯಿಗಳು ಮಾತ್ರ. ಇನ್ನು ಮುಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಸರ್ಕಾರದಿಂದ ಮತ್ತು ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ಸುಧಾರಣೆ ಆದ ತಕ್ಷಣ ಪ್ರಯತ್ನವನ್ನು ಮಾಡುತ್ತೇವೆಂದು ಹೇಳುತ್ತೇವೆ. ಈ ಕಾರ್ಖಾನೆ ರೈತರ ಕಾರ್ಖಾನೆ, ಸರ್ಕಾರದ್ದು ಅಲ್ಲ ಹಾಗೂ ಖಾಸಗಿಯವರದ್ದು ಅಲ್ಲ, ಆಡಳಿತ ಮಂಡಳಿಯ ತಪ್ಪು ತೀರ್ಮಾನದಿಂದ ಈ ಎಲ್ಲಾ ತೊಂದರೆಗಳಾಗಿವೆ. ಇನ್ನು ಎರಡನೆಯದಾಗಿ ಬೀದರ್, ಆಳಂದ ಸಹಕಾರಿ ಸಕ್ಕರೆ ಕಾರ್ಖಾನೆ ಇಲ್ಲೂ ಕೂಡ ಇದೇ ಪರಿಸ್ಥಿತಿ ಇದೆ, ಆಗಿನ 1993-94ರಲ್ಲಿ ಚುನಾವಣೆಗಳು

ಬಂದಿದ್ದರಿಂದ ಈ ಎರಡು ಕಾರ್ಖಾನೆಗಳಿಗೆ ನಷ್ಟವಾಗುವುದಕ್ಕೆ ಸಾಧ್ಯವಾಯಿತು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೂರನೆಯದಾಗಿ ಸಹಕಾರಿ ರಂಗದಲ್ಲಿ 1996-97ರಲ್ಲಿ ಬಾಕಿ ಉಳಿದಿರುವುದನ್ನು ಕೊಟ್ಟಿದ್ದೇವೆ, ಇಲ್ಲಿ ಒಂದು ಅಂಶ ತಾವು ಗಮನಿಸಬೇಕು, ಈ ಭಾಗದಲ್ಲಿ ಅಂದರೆ ಮಂಡ್ಯ, ಮೈಸೂರು, ಹಾಸನ ಮತ್ತು ಶಿವಮೊಗ್ಗಗಳಲ್ಲಿ ಒಂದು ಪದ್ಧತಿ ಇದೆ. ಅದು ಏನೆಂದರೆ ಕಬ್ಬು ಕಟಾವು ಆದ ಮೇಲೆ ಒಂದು ಒಪ್ಪಂದದ ಬೆಲೆ ಮಾಡಿಕೊಂಡು-ಒಟ್ಟಿಗೆ ಹಣವನ್ನು ಕೊಡುವಂತಹ ಒಂದುಪರಿಸ್ಥಿತಿ ಇದೆ. ಇದರಿಂದಾಗಿ ಈ ಭಾಗದಲ್ಲಿ ಬರುವ ಕಾರ್ಖಾನೆಗಳು ಈ ವರ್ಷದಿಂದ ಅಷ್ಟಾಗಿ ಬಾಕಿ ಉಳಿಸಿಕೊಂಡಿಲ್ಲ. ಆದರೆ ನಮ್ಮ ಕಡೆಯಲ್ಲಿ ನಾವು ಕಬ್ಬು ಕಟಾವು ಮಾಡುವಾಗ ಮೊದಲನೆಯದಾಗಿ ಮುಂಗಡ ಹಣ ಕೊಡುತ್ತೇವೆ ಆನಂತರ ಎರಡನೆಯ ಮುಂಗಡ ಹಣವನ್ನು ಕೊಡುತ್ತೇವೆ ಮುಂದಿನ ಸೀಜನ್ ಬರುವುದರೊಳಗೆ ಮೂರನೆ ಮುಂಗಡ ಹಣವನ್ನು ಕೊಡುತ್ತೇವೆ ಈ ರೀತಿ ಮೂರು ರೀತಿಯಲ್ಲಿ ಕೊಡುವುದರಿಂದ ಈ ಬಾಕಿ ಉಳಿದಿದೆ. ಆದರೆ ಹಿಂದಿನ ಲೆಕ್ಕ ತೆಗೆದು ನೋಡಿದರೆ ಆ ಭಾಗದಲ್ಲಿ ಬರುವ ಕಾರ್ಖಾನೆಗಳು ಯಾವು ಬಾಕಿ ಉಳಿಸಿಕೊಂಡು ಬಂದಿಲ್ಲ.

ಶ್ರೀ ಕೆ.ಎನ್.ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಅಧ್ಯಕ್ಷರೆ, ಸಹಕಾರಿ ಕ್ಷೇತ್ರಕ್ಕೂ ಖಾಸಗಿ ಕ್ಷೇತ್ರಕ್ಕೂ ಬಹಳ ವ್ಯತ್ಯಾಸ ಇದೆ. ಸಹಕಾರಿ ಕ್ಷೇತ್ರದಲ್ಲಿ ಬರುವ ಲಾಭವಾದರೆ ಎಲ್ಲ ಜನರಿಗೂ ಹಂಚಬೇಕಾಗುತ್ತದೆ ಆದರೆ ಖಾಸಗಿ ಕ್ಷೇತ್ರದಲ್ಲಿ ಬರತಕ್ಕಂಥ ಲಾಭ ಒಬ್ಬ ವ್ಯಕ್ತಿಗೆ ಹೋಗುತ್ತದೆ, ನಾವು ಸಹಕಾರಿ ಕ್ಷೇತ್ರದ ಬಗ್ಗೆ ಹೇಳುತ್ತಿಲ್ಲ, ಖಾಸಗಿ ಕ್ಷೇತ್ರದಲ್ಲಿ ಆಗತಕ್ಕಂಥ ಅನ್ಯಾಯ ಬಗ್ಗೆ ತಾವು ಹೇಳಬೇಕು.

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಅಧ್ಯಕ್ಷರೆ, ಬಾಕಿ ಉಳಿದಿರುವ ಮಾಹಿತಿಗಳನ್ನು ಸವಿಸ್ತಾರವಾಗಿ ಹೇಳುತ್ತಿದ್ದೇನೆ. ಖಾಸಗಿ ಸಕ್ಕರೆ ಕಾರ್ಖಾನೆಗಳಲ್ಲಿ ಮೊದಲನೆಯದಾಗಿ ಬನ್ನಾರಿಅಮ್ಮನ್ ಕಾರ್ಖಾನೆಯಿಂದ 18 ಲಕ್ಷ ರೂಪಾಯಿಗಳು ಬಾಕಿ ಉಳಿದಿದೆ. ಈ ಬಾಕಿ ಉಳಿದಿರುವುದಕ್ಕೆ ಕಾರಣ ಏನೆಂದರೆ ಕೋರ್ಟ್‌ನಲ್ಲಿ ವ್ಯಾಜ್ಯ ಇದೆ. ಎರಡನೆಯದಾಗಿ ಚಾಮುಂಡೇಶ್ವರಿ ಶುಗರ್ಸ್ ದಿನಾಂಕ: 31-7-97ಕ್ಕೆ 5 ಕೋಟಿ 84 ಲಕ್ಷ ರೂಪಾಯಿಗಳನ್ನು ಬಾಕಿ ಉಳಿಸಿಕೊಂಡಿದೆ. ಈ ಖಾಸಗಿ ಸಕ್ಕರೆ ಕಾರ್ಖಾನೆಯ ಬಾಕಿ 1996-97ನೇ ಸಾಲಿನಲ್ಲಿ ಉಳಿದಂಥ ಬಾಕಿ. ಇದಕ್ಕೆ ಕಾರಣ ಸಕ್ಕರೆ ಕಾರ್ಖಾನೆ ಬೆಲೆಯನ್ನು ಜಾಸ್ತಿ ಮಾಡಿದೆ ಎಂದು ಕಾರಣವನ್ನು ನೀಡಿದ್ದಾರೆ. ಆ ಕಾರಣವನ್ನು ಹೇಳುತ್ತಾ ಬಾಕಿಯನ್ನು ಉಳಿಸಿಕೊಂಡಿದ್ದಾರೆ. ಇದರಲ್ಲಿ ಕೇಂದ್ರ ಸರ್ಕಾರ ನಿಗದಿ ಪಡಿಸಿದಂತಹ ದುಡ್ಡಿನ ಮೇಲೆ ಬಡ್ಡಿ ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ನಿಗದಿ ಪಡಿಸಿದಂತಹ ದುಡ್ಡಿನ ಮೇಲೆ ಬಡ್ಡಿ ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ಈಗಾಗಲೇ ಪರಿಶೀಲಿಸುತ್ತದೆ. ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತಿದ್ದೇವೆ. ಏಕೆಂದರೆ ಕೇಂದ್ರ ಸರ್ಕಾರದ ಅಧಿನಿಯಮದ 5 ಎ ಮತ್ತು 3ಎ ಪ್ರಕಾರ ಕೇಂದ್ರ ಸರ್ಕಾರ ನಿಗದಿಮಾಡಿದ ದುಡ್ಡಿನ ಮೇಲೆ ಬಡ್ಡಿಯನ್ನು ಕೊಡುವಂತಹ ಯೋಜನೆ ಸರ್ಕಾರದ

ಪರಿಶೀಲನೆಯಲ್ಲಿದೆ. ಅದನ್ನು ಕೊಡಿಸುವ ವ್ಯವಸ್ಥೆಯನ್ನು ನಾನು ಮಾಡುತ್ತೇನೆಂದು ಹೇಳುತ್ತೇನೆ. ಮೂರನೆಯದಾಗಿ ತುಂಗಭದ್ರಾ ಶುಗರ್ಸ್ 100 ಲಕ್ಷ ರೂಪಾಯಿಗಳನ್ನು ಬಾಕಿ ಉಳಿಸಿಕೊಂಡಿದೆ. ಈಗಾಗಲೇ ಅದು ಎರಡು ವರ್ಷದ ಹಿಂದೆ ಬಂದಾಗಿದ್ದು, ಅದರ ಮಾಲೀಕ ತಪ್ಪಿಸಿಕೊಂಡಿದ್ದು, ಈ ಕಾರ್ಖಾನೆಯ ಮೇಲೆ ಈಗಾಗಲೇ ಸರ್ಕಾರ ಕ್ರಿಮಿನಲ್ ಕೇಸ್ ಹಾಕಿದೆ. ಕೇಂದ್ರ ಸರ್ಕಾರದ ಸಕ್ಕರೆ ಇಲಾಖೆಗೆ ಪತ್ರ ಬರೆದಿದ್ದೇವೆ, ಹಾಗೂ ಅಲ್ಲಿರುವ ಸಕ್ಕರೆ ಮಾನವ ಉಪಯೋಗಕ್ಕೆ ಬರುತ್ತದೆಯೊ ಇಲ್ಲವೆಂದು ಪರೀಕ್ಷೆ ಮಾಡಿಸಿದ್ದೇವೆ. ಬ್ಯಾಂಕರ್ಸ್ ಜೊತೆ ಈಗಾಗಲೇ ಚರ್ಚೆ ಕೂಡ ಮಾಡಿದ್ದೇವೆ ಸಕ್ಕರೆ ಕಾರ್ಖಾನೆಯಲ್ಲಿದ್ದಂಥ ಸಕ್ಕರೆಯಾಗಲೀ ಬೈಪ್ರಾಡೆಕ್ಟ್ಸ್ ಆಗಲಿ ಇವುಗಳೆನ್ನೆಲ್ಲಾ ಮಾರಿದರೂ ಕೂಡ ಅವನು ಮಾಡಿರುವ ಸಾಲ ತೀರಿಸುವುದಕ್ಕೆ ಆಗುವುದಿಲ್ಲ ಎನ್ನುವಂತ ಸ್ಥಿತಿ ಇದೆ. ಅದು ಏನೇ ಆದರೂ ರೈತರ ಹಾಗೂ ಕಾರ್ಮಿಕರ ಬಾಕಿಯನ್ನು ಕೊಡುವಂತಹ ಯೋಜನೆಗೆ ಸರ್ಕಾರ ಮೊದಲ ಪ್ರಾತಿನಿಧ್ಯ ಕೊಟ್ಟಿದೆ. ಕೇಂದ್ರ ಸರ್ಕಾರದಿಂದ ಆ ಸಕ್ಕರೆ ಬಿಡುಗಡೆಯಾದ ತಕ್ಷಣ ಅದನ್ನು ರೀ-ಪ್ರೋಸೆಸ್ ಮಾಡಿ ಮಾರಿ ಇವೆರಡರ ಬಾಕಿಯನ್ನು ಎಷ್ಟು ಸಾಧ್ಯವೋ ಅಷ್ಟು ತೀರಿಸಲು ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇವೆ. ಅದರ ಜೊತೆಗೆ ಮಹದೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ಮಾನ್ಯ ಪುಟ್ಟಣ್ಣಯ್ಯನವರು ಹೇಳಿದಾಗೆ ಖೋಡೆಯವರ ಸಕ್ಕರೆ ಕಾರ್ಖಾನೆ. ಖೋಡೆಯವರಿಗೆ ನೀವು ಅಂಜುತ್ತೀರಿ, ಮಣಿಯುತ್ತೀರಿ ಎಂದು ಮಾನ್ಯ ಪುಟ್ಟಣ್ಣಯ್ಯನವರು ಹೇಳುತ್ತಾರೆ. ಎಲ್ಲರೂ ಹೇಳಿದರು, ನಮ್ಮ ಸರ್ಕಾರ ಬಂದ ಮೇಲೆ 11 ಕೋಟಿ ರೂಪಾಯಿಗಳು ಬಾಕಿ ಕೊಡಬೇಕಾಗಿತ್ತು, ಆ ಬಾಕಿಯನ್ನು ಎರಡು ವರ್ಷಗಳಲ್ಲಿ ಕೊಡಿಸುವಂತಹ ವ್ಯವಸ್ಥೆಯನ್ನು ನಮ್ಮ ಸರ್ಕಾರ ಮಾಡಿದೆಯೇ ವಿನಾ ಬೇರೆ ಯಾವ ಸರ್ಕಾರ ಮಾಡಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಕ್ರಿಮಿನಲ್ ಕೇಸ್ ಹಾಕಿದ್ದು ಎಲ್ಲಾ ರೀತಿಯಿಂದಲೂ ಅವರನ್ನು ಬಿಗಿ ಮಾಡಿ ಬಾಕಿ ಕೊಡುವಂತಹ ವ್ಯವಸ್ಥೆ ಮಾಡಿದ್ದರ ಫಲವಾಗಿ ಈಗ 65 ಲಕ್ಷ ರೂಪಾಯಿಗಳು ಬಾಕಿ ಉಳಿದಿದೆ. ಅದನ್ನು ಮುಂದಿನ ಎರಡು ತಿಂಗಳಲ್ಲಿ ಕೊಡಿಸುವಂತಹ ವ್ಯವಸ್ಥೆ ನಮ್ಮ ಸರ್ಕಾರ ಮಾಡುತ್ತದೆ. ಅದನ್ನು ಮಾಡಿಸಿಯೇ ಮಾಡಿಸುತ್ತೇವೆ. ಇದರ ಜೊತೆಗೆ, ಉಗಾರ್ ಸಕ್ಕರೆ ಕಾರ್ಖಾನೆ, ಈ ಕಾರ್ಖಾನೆಯಿಂದ 15 ಲಕ್ಷ ರೂಪಾಯಿಗಳು ಬಾಕಿ ಬರಬೇಕಾಗಿದೆ. ಕೋರ್ಟ್‌ನಲ್ಲಿ ಕೇಸ್ ಇರುವುದರಿಂದ ಈ ರೀತಿ ಬಾಕಿ ಉಳಿದುಕೊಂಡಿದೆ. ಕೋರ್ಟಿನ ವ್ಯಾಜ್ಯ ಮುಗಿದನಂತರ ಈ ರೀತಿ ರಾಜ್ಯದಲ್ಲಿ ಇರುವಂತಹ ಸಕ್ಕರೆ ಕಾರ್ಖಾನೆಗಳ ಬಾಕಿ ಬಗ್ಗೆ ಸವಿಸ್ತಾರ ಮಾಹಿತಿ ನೀಡುತ್ತೇನೆ, ಇನ್ನು ಬೆಲೆ ನಿಗದಿಪಡಿಸುವ ಬಗ್ಗೆ ಸಾಕಷ್ಟು ಮಾನ್ಯ ಸದಸ್ಯರು ಮಾತನಾಡಿದ್ದಾರೆ.

ಅಧ್ಯಕ್ಷರು:- ಆ ಎಲ್ಲಾ ಸಲಹೆಗಳನ್ನು ಪರಿಶೀಲನೆ ಮಾಡಿ ಸೂಕ್ತ ಸಮಯದಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಿ. ಈಗ ಕ್ಲಾರಿಫಿಕೇಷನ್ ಇಲ್ಲ. ಅವರು ಪೇಪರ್ ಲೇ ಮಾಡಲಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಅಲ್ಲಾ ಗೆಜೆಟ್ ಏಕೆ ಮಾಡಿದರು?

ಶ್ರೀ ಉಮೇಶ್ ವಿ.ಕತ್ತಿ: ಈ ವಿಷಯದಲ್ಲಿ ನಾವು ಏನು ಮಾಡಿದ್ದೇವೆ ಎಂಬುದನ್ನು ಸವಿಸ್ತಾರವಾಗಿ ಹೇಳಬೇಕಾಗುತ್ತದೆ, ನಾವು ಇದರಲ್ಲಿ ಮುಚ್ಚುಮರೆ ಮಾಡುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಕಾರ್ಖಾನೆಯ ಮಾಲೀಕರ ಮೇಲೆ ಆರೋಪ ಮಾಡಿದರೆ ಸರ್ಕಾರದ ಮೇಲೆ ಆರೋಪ ಮಾಡಿದ ಹಾಗೆ. ಅಂದರೆ ಈ ಕಾರ್ಖಾನೆಗಳ ಮಾಲೀಕರ ಮೇಲೆ ಸರ್ಕಾರದ ಬೆಂಬಲ ಎಷ್ಟಿದೆ ಎಂಬುದು ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಸದಸ್ಯರುಗಳು ಬಾಕಿ ಬಗ್ಗೆ ಹೇಳಿದ್ದಾರೆ, ಅದರ ಬಗ್ಗೆ ನಾನು ಹೇಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ರೈತರಿಗೆ ಬರಬೇಕಾದ ಬಾಕಿಯನ್ನು ಕೊಡಿಸಿ ಕೊಡಬೇಕು ಅದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಾವು ಹೇಳಬೇಕು.

ಅಧ್ಯಕ್ಷರು: ಈಗ ಈ ಚರ್ಚೆ ಮುಗಿದಿದೆ, ಕಂದಾಯ ಮಂತ್ರಿಗಳು ನಿಮ್ಮ ಸ್ಟೇಟ್‌ಮೆಂಟ್ ಮಾಡಿ.

ಶ್ರೀ ಉಮೇಶ್ ವಿ.ಕತ್ತಿ: ಬೆಲೆ ನಿಗದಿ ಬಗ್ಗೆ ಹೇಳಿದ್ದಾರೆ, ನಾಳೆ 27ನೇ ತಾರೀಖಿಗೆ ಪ್ರತಿವರ್ಷದಂತೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆದಿರತಕ್ಕಂಥ ಒಂದು ಪದ್ಧತಿ ಇದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಟ್ರಾನ್ಸಪೋರ್ಟೇಷನ್ ಸಬ್ಸಿಡಿ ಬಗ್ಗೆ ಹೇಳಿ.

ಅಧ್ಯಕ್ಷರು: ಈ ಎಲ್ಲಾ ವಿಷಯಗಳನ್ನು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಚರ್ಚೆ ಮಾಡಿ. ಈಗ ಚರ್ಚೆ ಮುಗಿದಿದೆ, ಉಳಿದ ಎಲ್ಲಾ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಿ.

ಶ್ರೀ ಉಮೇಶ್ ವಿ.ಕತ್ತಿ: 27 ನೇ ತಾರೀಖು ನಡೆಯುವ ಸಭೆಯಲ್ಲ ಬೆಲೆ ನಿಗದಿ ಬಗ್ಗೆ ಚರ್ಚೆ ಮಾಡಲಾಗುವುದು, ಇದು ವಿಳಂಬವಾಗಲು ಕಾರಣ ಏನೆಂದರೆ ಕೇಂದ್ರ ಸರ್ಕಾರ SMB. ತೀರ್ಮಾನ ಮಾಡಬೇಕಾಗಿದ್ದ ಕಾರಣ ಬೆಲೆ ನಿಗದಿ ಮಾಡುವುದು ವಿಳಂಬವಾಗಿದೆ, ನಾವು ಯಾವುದೇ ತರಹ ವಿಳಂಬ ಮಾಡಲು ಪ್ರಯತ್ನ ಮಾಡಿಲ್ಲ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ರೈತರ ಬಾಕಿಯನ್ನು ಕೊಡಿಸುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ ಎಂಬುದನ್ನು ನಾವು ಕೇಳಿದ್ದೇವೆ.

ಶ್ರೀ ಉಮೇಶ್ ವಿ.ಕತ್ತಿ: ಈ ಕಡೆ ಬರುವಂತಹ ಸಕ್ಕರೆ ಕಾರ್ಖಾನೆಯ ಬಾಕಿಯನ್ನು....

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಇವರು ಕೆಲವು ಖಾಸಗಿ ಕಾರ್ಖಾನೆಯವರ ಜೊತೆಗೆ ಒಂದುರೀತಿಯ ಹೊಂದಾಣಿಕೆ ಮಾಡಿಕೊಂಡು, ಇವತ್ತು ರೈತರಿಗೆ ಕೊಡಬೇಕಾದ ಬಾಕಿ 35 ಕೋಟಿ ರೂಪಾಯಿಗಳನ್ನು ಕೊಡಲಿಲ್ಲ, ರೈತರ ಬಗ್ಗೆ ಇವರಿಗೆ ಕಳಕಳಿ ಇಲ್ಲ. ಇದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಗೊಂದಲ)

(ಭಾರತೀಯ ಜನತಾಪಕ್ಷದ ಸದಸ್ಯರು ಮತ್ತು ಶ್ರೀ ವಾಟಾಳ್ ನಾಗರಾಜ್, ಶ್ರೀ ಕೆ.ಎಸ್.ಪುಟ್ಟಣ್ಣಯ್ಯ, ಹಾಗೂ ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಸಭಾತ್ಯಾಗ ಮಾಡಿದರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾನು ಕೇಳಿರುವುದು ಸ್ಪಷ್ಟವಿದೆ. 35 ಕೋಟಿ ರೂಪಾಯಿಗಳು ಬಾಕಿ ಇರುವುದನ್ನು ಕೊಡಿಸುವುದಕ್ಕೆ ಏನು ಮಾಡುತ್ತೀರಿ ಎಂದು ಕೇಳಿದರು. ಅದು ಖೋಡೆ ಕಂಪನಿಯದೇ ಇರಬಹುದು ಅಥವಾ ಮಂಡ್ಯ ತಾಲ್ಲೂಕಿನಲ್ಲಿರತಕ್ಕ ಪನ್ನೀರ್ ಕಂಪನಿಯದೇ ಇರಬಹುದು. ಗೌರಿಬಿದನೂರಿನದೇ ಇರಬಹುದು ಅಥವಾ ಅಳಂದ್‌ದೇ ಇರಬಹುದು. ಇವೆಲ್ಲಕ್ಕೂ ಕೂಡ ಸರ್ಕಾರದ ಪ್ರಯತ್ನ ಇರಬೇಕಲ್ಲ. ಆ ಪ್ರಯತ್ನದ ಬಗ್ಗೆ ಅವರು ಏನೂ ಹೇಳುತ್ತಾ ಇಲ್ಲ. ಸರ್ಕಾರ ಇದೆ, ನಮ್ಮ ಪ್ರಯತ್ನ ನಾವು ಮಾಡಿದ್ದೇವೆಂದು ಹೇಳಿದರೆ ಇವರು ರೈತರಿಗೆ ಕೊಡತಕ್ಕ ಹಣವನ್ನು ವಸೂಲಿ ಮಾಡಿಕೊಡುವುದರಲ್ಲಿ, ವಿಫಲರಾಗಿದ್ದಾರೆ. ಪ್ರಾಮಾಣಿಕವಾಗಿ ಪ್ರಯತ್ನ ಮಾಡಿಕೊಡುತ್ತೇವೆಂದು ಹೇಳತಕ್ಕಂಥ ಒಂದು ಸೌಜನ್ಯವೂ ಕೂಡ ಅವರಿಗಿಲ್ಲ.

(ಗೊಂದಲ)

ಅಧ್ಯಕ್ಷರು: ಪ್ರತಿಭಟನೆ ಮಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೇ, ಪ್ರತಿಭಟನೆಯನ್ನು ತಾವೂ ಕೂಡ ಮಾಡಬೇಕಾಗುತ್ತದೆ. ಗೌರಿಬಿದನೂರು ಎಂದರೆ, ತಮ್ಮ ರೈತರೂ ತೊಂದರೆಯಲ್ಲಿದ್ದಾರೆ.

ಅಧ್ಯಕ್ಷರು: ನಾನು ಪ್ರತಿಭಟನೆ ಮಾಡುವಂಥ ಸ್ಥಿತಿಗೆ ಬಂದಿದ್ದೇನೆ, ಹಸಿವಾಗುತ್ತಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಂಥ ನೀತಿಯನ್ನು ನಾವೂ ಕೂಡ ಖಂಡಿಸಿ, ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇವೆ.

(ಕಾಂಗ್ರೆಸ್ (ಐ) ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಯಡಿಯೂರಪ್ಪನವರು ಸಕ್ಕರೆ ಕಾರ್ಖಾನೆಗಳ ಬಗ್ಗೆ ಆರೋಪ ಮಾಡಿದ್ದಾರೆ. ಅಂಥದ್ದೇನಾದರೂ ಅವರು ಪ್ರೂವ್ ಮಾಡಿಕೊಟ್ಟರೆ, ಸಕ್ಕರೆ ಮಂತ್ರಿಯಾಗಿ ನಾನು ರಾಜಕೀಯದಿಂದ ನಿವೃತ್ತಿ ಹೊಂದುತ್ತೇನೆಂದು ಘೋಷಣೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಎರಡನೆಯದಾಗಿ, ನಮ್ಮ ಸರ್ಕಾರ ಬಂದಮೇಲೆ, ಬೀದರ್ ಆಳಂದ, ಮಹದೇಶ್ವರ ಇವೆಲ್ಲಾ ಸಕ್ಕರೆ ಕಾರ್ಖಾನೆಗಳಿಂದ 30 ಕೋಟಿ ರೂಪಾಯಿಗಳ ಬಾಕಿಯನ್ನು ರೈತರಿಗೆ ಕೊಡಿಸಿಕೊಡುವ ಪ್ರಯತ್ನ ಮಾಡಲಾಗಿದೆ ಎಂದು ತಮ್ಮ ಮುಖೇನ ಮಾನ್ಯ ಸದಸ್ಯರಿಗೆ ಹೇಳಲು ಇಷ್ಟಪಡುತ್ತೇನೆ. ಅವರು ಇದನ್ನೆಲ್ಲಾ ಕೇಳಲಾರದೆ ಇವತ್ತು ಹೊರಗೆ ಹೋಗಿದ್ದಾರೆ.

ಶ್ರೀ ಸಿ.ಭೈರೇಗೌಡ:- ಮಾನ್ಯ ಅಧ್ಯಕ್ಷರೇ, ಇದು ರೈತನ ಪ್ರಶ್ನೆ. 31 ಕೋಟಿ ರೂಪಾಯಿಗಳನ್ನು ಯಾರೂ ದುಡಿದು ರೈತನ ಕೈಗೆ ತಂದುಕೊಡಲಿಲ್ಲ. ಬೆವರು ಸುರಿಸಿ, ರಕ್ತ ಸುರಿಸಿ 31 ಕೋಟಿ ರೂಪಾಯಿಗಳ ಕಬ್ಬನ್ನು ತೆಗೆದುಕೊಂಡು ಹೋಗಿ ಸಕ್ಕರೆ ಕಾರ್ಖಾನೆಗಳಿಗೆ ಕೊಟ್ಟಿದ್ದಾರೆ. ಆ ಹಣವನ್ನು ಕೊಡುವುದಿಲ್ಲವೆಂದು ಹೇಳುವುದಕ್ಕೆ ಯಾರಿಗೂ ಹಕ್ಕಿಲ್ಲ. ಕೊಡಬೇಕಾಗಿರತಕ್ಕಂತಾದ್ದು ಅವರ ಕರ್ತವ್ಯ. ಆ ಕರ್ತವ್ಯವನ್ನು ನಿರ್ವಹಿಸದೇ ಇರುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿರುವಂತಾದ್ದು ಸರ್ಕಾರದ ಕರ್ತವ್ಯವೂ ಹೌದು. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಅದಕ್ಕೆ ಏನು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಮೋಸ ಮಾಡುವುದಕ್ಕೂ, ಅನ್ಯಾಯ ಮಾಡುವುದಕ್ಕೂ ಒಂದುಮಿತಿ ಇರಬೇಕಾಗುತ್ತದೆ. ಅದು ಯಾರ ಹಣ? ಸಕ್ಕರೆ ಕಂಪನಿಗಳ ಮಾಲೀಕರು ಯಾರಾದರೂ ಹೋಗಿ ದುಡಿದಿದ್ದಾರೇನು? ಹೊಲ,ಗದ್ದೆಗಳಲ್ಲಿ ಬೆಳಿಗ್ಗೆ, ಸಾಯಂಕಾಲ ಮಳೆ ಬಿಸಿಲು, ಗಾಳಿಯಲ್ಲಿ ನಿಂತು ಇವರು ಕಬ್ಬು ಬೆಳೆದಿದ್ದಾರೆಯೇ? ಈ ಹಣ ಕಬ್ಬು ಬೆಳೆದಿರತಕ್ಕಂಥ ರೈತನದು. ರೈತರಿಗೆ ನ್ಯಾಯಯುತವಾಗಿ ಕಾನೂನು ಪ್ರಕಾರ ಸೇರಬೇಕಾಗಿರತಕ್ಕಂಥಾದ್ದು...

ಅಧ್ಯಕ್ಷರು:- ಅದನ್ನು ನೀವೇ ಮಾಡಬೇಕಾಗಿರುವುದು.

ಶ್ರೀ ಸಿ.ಭೈರೇಗೌಡ:- ಆ ಹಣವನ್ನು ಕೊಡಿಸುವುದಕ್ಕೆ ಸರ್ಕಾರ ಎಲ್ಲಾ ಪ್ರಯತ್ನವನ್ನೂ ಮಾಡುತ್ತದೆ. ಅದಕ್ಕೆ, ಹಾಲಿ ಇರತಕ್ಕಂಥ ಕಾನೂನಿನಲ್ಲಿ ಅವಕಾಶ ಇಲ್ಲದೇ ಇದ್ದರೆ, ಅಂತಹ ಕಾನೂನನ್ನು ಇಲ್ಲಿ ಜಾರಿಗೆ ತರುವುದಕ್ಕೆ ಕೂಡ ಸರ್ಕಾರ ಪ್ರಯತ್ನ ಮಾಡುತ್ತದೆ. ನಾನು ಕೂಡ ಒಬ್ಬ ರೈತನಾಗಿ, ಬೆಳೆಗಾರನಾಗಿ ಇವತ್ತಿನದಿವಸ ಈ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು:- ಒಳ್ಳೆಯದು, ತಮಗೆ ಅಭಿನಂದನೆಗಳು.

ಶ್ರೀ ಕೆ.ಎನ್.ನಾಗೇಗೌಡ:- ಅಧ್ಯಕ್ಷರೇ, ಒಂದೇ ಒಂದು ನಿಮಿಷ ದಯವಿಟ್ಟು ಕೇಳಿ.

ಶ್ರೀ ಸಿ.ಭೈರೇಗೌಡ:- ಸಕ್ಕರೆ ಕಾರ್ಖಾನೆಗಳವರು ಆಟವಾಡುವುದಕ್ಕೂ ಒಂದು ಮಿತಿ ಇರಬೇಕಾಗುತ್ತದೆ. ಇವತ್ತಿನದಿವಸ ರೈತರ ಮೇಲೆ ಮಿತಿಮೀರಿದಂಥ ಆಟ ನಡೆಯುತ್ತಿದೆ.

ಅಧ್ಯಕ್ಷರು:- ನೀವೇ ಸರ್ಕಾರ, ಅವರ ಮೇಲೆ ನೀವೇ ಕ್ರಮ ಜರುಗಿಸಿ.

ಶ್ರೀ ಕೆ.ಎನ್.ನಾಗೇಗೌಡ:- ಅಧ್ಯಕ್ಷರೇ, ಬಿ.ಜೆ.ಪಿ.ಯುವರು ಮತ್ತು ಕಾಂಗ್ರೆಸ್‌ನವರು ಏನು ಹೇಳಿ ಹೋದರೆಂದರೆ, ಇವರೂ ಸಕ್ಕರೆ ಕಂಪನಿಗಳ ಮಾಲೀಕರ ಜೊತೆ ಸೇರಿಕೊಂಡು ಬಿಟ್ಟಿದ್ದಾರೆ, ಆದರಿಂದ ಕೊಟ್ಟಿಲ್ಲ ಎನ್ನತಕ್ಕ ಮಾತನ್ನು ಹೇಳಿ ಹೋದರು. ನನ್ನ ಕ್ಷೇತ್ರದಲ್ಲೇ ಇರತಕ್ಕ ಫ್ಯಾಕ್ಟರಿಯವರು ಸುಮಾರು 6-7 ಕೋಟಿ ರೂಪಾಯಿಗಳನ್ನು ಕೊಡಬೇಕು. 10 ಕೋಟಿ ರೂಪಾಯಿಗಳು ಬೀದರ್ ಆದರೆ, ಕಾಳಮುದ್ದನದೊಡ್ಡಿ ಚಾಮುಂಡೇಶ್ವರಿ ಫ್ಯಾಕ್ಟರಿ 6-7 ಕೋಟಿ ರೂಪಾಯಿಗಳು ಕೊಡಬೇಕು. ಎಲ್ಲಾ ಕಡೆ ಕ್ರಿಮಿನಲ್ ಕೇಸ್ ಪ್ರಾರಂಭ ಮಾಡಿಸಿದ್ದೇವೆ. ಮೀಟಿಂಗ್‌ಗಳನ್ನು ಕರೆದಿದ್ದೇವೆ. ಸರ್ಕಾರ ಏನು ಸುಮ್ಮನೆ ಕುಳಿತುಕೊಂಡಿಲ್ಲ. ಆದರೆ, ಒಂದು ಏನು ಮಾಡಬೇಕೆಂದರೆ, ಸರ್ಕಾರ ಯಾವತ್ತು ದೇವಿ ಶುಗರ್ ಫ್ಯಾಕ್ಟರಿಯನ್ನು ತೆಗೆದುಕೊಂಡಿತು, ಯಾರನ್ನು 6 ತಿಂಗಳೊಳಗೆ ನಾವು ಸಜೆಸ್ಟ್ ಮಾಡಿದ್ದೇವೆ, ಅವರು 27ನೇ ತಾರೀಖು ಮೀಟಿಂಗ್ ಕರೆದಿದ್ದಾರೆ; ರೇಟ್ ಫಿಕ್ಸ್ ಮಾಡುವುದಕ್ಕೆ ಕರೆದಿದ್ದಾರೆ. ಸರ್ಕಾರದ ಪರವಾಗಿ ರೈತರಿಗೆ ಬರಬೇಕಾದ ಬಾಕಿಯನ್ನು 2-3 ತಿಂಗಳೊಳಗೆ ಕೊಡಿಸುವುದಕ್ಕೆ ಸರ್ಕಾರ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು:- ನಿಮ್ಮ ರೈತರ ಪರವಾದ ನಿಲುವನ್ನು ನಾವು ಅಭಿನಂದಿಸಿದ್ದೇವೆ. ಮಾನ್ಯ ಕಂದಾಯ ಮಂತ್ರಿಗಳು ಆ ಹೇಳಿಕೆಯನ್ನು ಮಂಡನೆ ಮಾಡಿ.

ಶ್ರೀ ವಾಟಾಳ್ ನಾಗರಾಜ್:- ಮತ್ತೊಂದು ನಿಯಮ 69ರ ಪ್ರಕಾರ, ಅದು ಚರ್ಚೆಗೆ ಇಲ್ಲವೇ? ಇದು ಬಹಳ ಪ್ರಾಮುಖ್ಯವಾದುದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆ ನಿರ್ಣಯದ ವಿಚಾರ ಹೇಳಿಬಿಡುತ್ತೇನೆ. ಇವತ್ತು ತೆಗೆದುಕೊಳ್ಳದಿದ್ದರೆ, ಮುಂದೆ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು:- ಈಗಾಗಲೇ ಮಧ್ಯಾಹ್ನ ಎರಡೂವರೆ ಗಂಟೆಯಾಗಿದೆ. ಮೂರು ಗಂಟೆಗೆ ಕಾವೇರಿ ಬಗ್ಗೆ ಸಭೆ ಇದೆ. ಆದ್ದರಿಂದ, ಮುಂದೆ ತೆಗೆದುಕೊಳ್ಳೋಣ.

ಶ್ರೀ ಟಿ.ಎಂ.ಚಂದ್ರಶೇಖರಯ್ಯ:- ಮಾನ್ಯ ಅಧ್ಯಕ್ಷರೇ, ಶಿರಗುಪ್ಪ ಸಕ್ಕರೆ ಕಾರ್ಖಾನೆಯವರು ರೈತರಿಗೆ ಸರಿಯಾದ ಬೆಲೆ ಕೊಡುತ್ತಾ ಇಲ್ಲ. ಸರ್ಕಾರ

ನಿಗದಿಪಡಿಸಿರುವಂಥ ಎಸ್.ಎಲ್.ಪಿ. ರೇಟ್ ಸಹಿತ ಕೊಡುವುದಕ್ಕೆ ಅವರು ಒಪ್ಪುತ್ತಾ ಇಲ್ಲ. ಮಾನ್ಯ ಸಕ್ಕರೆ ಮಂತ್ರಿಗಳು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು:- ನೀವು ಮಾನ್ಯ ಬೈರೇಗೌಡರಿಗೆ ಹೇಳಿ, ಕ್ರಮ ಜರುಗಿಸುತ್ತಾರೆ. ಶಿರಗುಪ್ಪ ಸಕ್ಕರೆ ಕಾರ್ಖಾನೆಯವರು ರೈತರಿಗೆ ಸರಿಯಾದ ಬೆಲೆ ಕೊಡುತ್ತಾ ಇಲ್ಲವಂತೆ. ಈಗ ಕಂದಾಯ ಸಚಿವರು ಹೇಳಿಕೆಯನ್ನು ಮಂಡನೆ ಮಾಡಿ. ಶಿರಗುಪ್ಪ ಸಕ್ಕರೆ ಕಾರ್ಖಾನೆ ಬಗ್ಗೆ ರೈತರಸಮಸ್ಯೆಯನ್ನು ಪರಿಹಾರ ಮಾಡೋಣ.

ಸಚಿವರ ಹೇಳಿಕೆ

ವಿಷಯ:- ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಕುರಿತು.

+ ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಬಗ್ಗೆ ತಯಾರು ಮಾಡಿರತಕ್ಕ ಸ್ಟೇಟ್‌ಮೆಂಟನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯದಲ್ಲಿ ಪ್ರಸ್ತುತ ವರ್ಷದ ಮುಂಗಾರು ಮಳೆಯು ದ್ವಂದ್ವ ನಡೆಯನ್ನು ತೋರಿದೆ. ಸುಮಾರು ಹತ್ತು ದಿನಗಳಷ್ಟು ವಿಳಂಬವಾಗಿ ರಾಜ್ಯಕ್ಕೆ ಕಾಲಿರಿಸಿದ ಮುಂಗಾರು ಮಳೆಯು ರಾಜ್ಯದ ಕರಾವಳಿ ಹಾಗೂ ಮಲೆನಾಡಿನ ಪ್ರದೇಶಗಳಲ್ಲಿ ಮುಂಗಾರು ಮಳೆ ಅತೀ ಚುರುಕಾಗಿದ್ದರೆ, ಇತರೆ ಕಡೆಗಳಲ್ಲಿ ಸಕಾಲದಲ್ಲಿ ಸಮರ್ಪಕವಾಗಿ ಮಳೆಯಾಗದೆ ಕ್ಷೀಣ ಚಟುವಟಿಕೆಯನ್ನು ತೋರಿದೆ. ರಾಜ್ಯದಲ್ಲಿ ಜೂನ್ ತಿಂಗಳಿನಿಂದ ಆಗಸ್ಟ್ ಮೊದಲ ಪಾಕ್ಷಿಕ ಅವಧಿಯಲ್ಲಿನ ಸರಾಸರಿ ಮಾಮೂಲು ಮಳೆಯು 597 ಮಿ.ಮೀ.ಗಳಿಗಿದ್ದು, ವಾಸ್ತವವಾಗಿ 695 ಮಿ.ಮೀ. ಮಳೆಯಾಗಿದ್ದು, ಶೇಕಡಾ 16ರಷ್ಟು ಹೆಚ್ಚಿನ ಪ್ರಮಾಣದ ಮಳೆ ಬಿದ್ದಿರುವುದು ವ್ಯಕ್ತವಾಗುತ್ತದೆ. ರಾಜ್ಯದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಾಮೂಲು ಮಳೆಗಿಂತ ಶೇಕಡಾ 50ರಷ್ಟು, ಬೆಳಗಾವಿ ಜಿಲ್ಲೆಯಲ್ಲಿ ಶೇಕಡಾ 33 ರಷ್ಟು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಕಡಾ 24ರಷ್ಟು, ಶಿವಮೊಗ್ಗ ಜಿಲ್ಲೆಯಲ್ಲಿ ಶೇಕಡಾ 22 ರಷ್ಟು, ಚಿತ್ರದುರ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ತಲಾ ಶೇಕಡಾ 21 ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಮಳೆ ಬಿದ್ದಿರುತ್ತದೆ. ಮೈಸೂರು, ಉತ್ತರಕನ್ನಡ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಮಾಮೂಲು ಮಳೆಗಿಂತ ಶೇಕಡಾ 3ರಿಂದ 16ರಷ್ಟು ಮಳೆ ಆಗಿರುತ್ತದೆ. ಆದರೆ, ಕೋಲಾರ ಹಾಗೂ ಗುಲ್ಬರ್ಗಾ ಜಿಲ್ಲೆಯಲ್ಲಿ ಮಾಮೂಲು ಮಳೆಗಿಂತ ಕ್ರಮವಾಗಿ ಶೇಕಡಾ 36 : ಹಾಗೂ ಶೇಕಡಾ 37ರಷ್ಟು ಪ್ರಮಾಣದಲ್ಲಿ ಕಡಿಮೆ ಮಳೆ ಬಿದ್ದಿರುತ್ತದೆ. ಹಾಗೆಯೇ, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಮಂಡ್ಯ ಬಳ್ಳಾರಿ, ತುಮಕೂರು, ಬೀದರ್ ರಾಯಚೂರು ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಮಾಮೂಲು ಮಳೆಗಿಂತ ಶೇಕಡಾ 2ರಿಂದ ಶೇಕಡಾ 18ರಷ್ಟು ಕಡಿಮೆ ಮಳೆಯಾಗಿರುತ್ತದೆ. ಒಟ್ಟಿನಲ್ಲಿ, ಇಲ್ಲಿಯವರೆಗಿನ ಮುಂಗಾರು ಮಳೆಯನ್ನು ವ್ಯವಸ್ಥಿತವಾಗಿ ಅಭ್ಯಸಿಸಿದಾಗ, ರಾಜ್ಯದಲ್ಲಿ